ಕಲ್ಯಾಣ ಕಿರಣ

ಏಪ್ರಿಲ್ - 2002

ಬೆಲೆ: ರೂ. 5-00

Digitalised by e Sahithya Documentataion Forum
Sponsored by Sarayu Foundation Trust

ಬೆಂಗಳೂರು ನಗರದಲ್ಲಿ ಬಸವಜ್ಯೋತಿಯನ್ನು ಸ್ವಾಗತಿಸುತ್ತಿರುವುದು. ಎಡಭಾಗದಿಂದ, ಪೂಜ್ಯ ಶ್ರೀ ಮಾತಾಜಿಯವರು,
ಸುಶೀಲಮ್ಮ-ಸುಮಂಗಲಿ ಸೇವಾಶ್ರಮ, ಚಿಮ್ಮೈ, ಚರಣ ಸತ್ಯಾನಂದರು,
ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮೀಜಿಯವರು, ಚರಣರಾದ ಶ್ರೀ ಕಂಠ ಮೂರ್ತಿ!

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ
ಸಂಚಿಕೆ -4	ಏಪ್ರಿಲ್ 2002	ವಾರ್ಷಿಕ ಚಂದಾ 50/- ರೂ

ಕಲ್ಯಾಣ ಪರ್ವಕ್ಕೆ ಆಹ್ವಾನ

ಬಾ ಬಾ ಬಾ ಎಲೆ ಶರಣ. ನೀನು....
ಕಲ್ಯಾಣ ಪರ್ವಕೆ ಬಂದು ಪಾವನನಾಗು ॥ಪ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ಅ.ಪ॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದದಾ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥1॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ. ॥2॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಚನ್ನಯ್ಯ ಮಾಚಯ್ಯ ನಾಗಲೆಯು ಕಾದಿದರು ॥3॥

ಶರಣರ ಕರುಳಿನ ಕರೆಯು ತಾ ಕೇಳಿಸದೆ ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ ? ॥4॥

ಬಸವ ಕಲ್ಯಾಣವು ಶರಣ ಭೂಮಿ ಎಂದು
ಕಲ್ಯಾಣ ಪರ್ವಕೆ ಬಂದು ಶರಣ ಸ್ಮರಣೆಯ ಮಾಡು
ಬಸವ ಗುರು ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ನೀ ಧನ್ಯನಾಗು ॥5॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಬಸವಾತ್ಮಜೆಯಾದ ಮಾತೆಯಾ ಕರೆಯಿದು. ॥6॥

- ಬಸವಾತ್ಮಜೆ

www.Lingayathism.com

ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

Digitalised by e Sahithya Documentataion Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ
ಸಂಚಿಕೆ -4	ಏಪ್ರಿಲ್ 2002	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಕಲ್ಯಾಣ ಪರ್ವಕ್ಕೆ ಆಹ್ವಾನ (ಕವನ)	ಬಸವಾತ್ಮಜೆ	3
2. ಬನ್ನಿ ಕಲ್ಯಾಣ ಪರ್ವಕೆ (ಕವನ)	ಬಸವಾತ್ಮಜೆ	6
3. ಯುಗದ ಉತ್ಸಾಹವ ನೋಡಿರೆ (ವಚನ ವಿಶ್ಲೇಷಣೆ)	ಮಾತಾಜಿ	7
4. ಜ್ಯೋತಿ ಯಾತ್ರೆ ತಂದ ಚೈತನ್ಯ	ಮಾತಾಜಿ	11
5. ಸಮಸ್ಯೆ ? ಸಮಾಧಾನ !	ಮಾತಾಜಿ	15
6. ಕಲ್ಯಾಣ ಪರ್ವ ಕಾರ್ಯಕ್ರಮದ ರೂಪುರೇಷೆಗಳು	-	19
7. ಬಸವ ಕಲ್ಯಾಣ - ಸ್ಥಳ ನಿರ್ದೇಶನ ಮತ್ತು ವಾಹನಾನುಕೂಲ	-	21
8. ಬೀದರ್ ಪ್ರವಚನ ಸಮಾರೋಪ ಸಮಾರಂಭ	ನಾಗಶೆಟ್ಟಿ ಕೆ. ಶೆಟಕಾರ	25
9. ಬಸವ ತತ್ತ್ವ ಪ್ರಸಾರ - ಯಾತ್ರೆಗೆ ನಿರ್ಧಾರ	ಮಾತಾಜಿ	26
10. ಧನ ದಾಸೋಹಿಗಳ ಯಾದಿ	-	28

ಕಾಯಕ ಕಲಿ ಮಡಿವಾಳ ಮಾಚಿದೇವರ ಜಯಂತಿ ಮೇ 1

869ನೆಯ ಬಸವ ಜಯಂತಿಯು ದಿನಾಂಕ 14-5-2002ರಂದು ಒದಗಿ ಬಂದಿದ್ದು ಕಲ್ಯಾಣ ಕಿರಣದ ಓದುಗರಿಗೆ ಶುಭಾಶಯಗಳು

ಮುಖಪುಟ : ಬೀದರ್ ನಗರಕ್ಕೆ ಪ್ರವಚನ ಮುಕ್ತಾಯ ಸಮಾರಂಭಕ್ಕೆ ಆಗಮಿಸಿದಾಗ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಗೆ ಭವ್ಯ ಸ್ವಾಗತ ನೀಡಲಾಯಿತು. ಉಭಯ ಮಹಿಳಾ ಜಗದ್ಗುರುಗಳನ್ನು ಮೆರವಣಿಗೆಯಲ್ಲಿ ಕರೆತರಲಾಯಿತು.

KALYANA KIRANA- Reg. No. 19988/70. Monthly Magazine printed and published by B.Shambulingaiah. at Prabhudeva Printing Press, Basava Gangotri, Kumbalgodu, Bangalore-560074. Phone · 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035
ದೂರವಾಣಿ : 3325335 / 3322790 20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

86666

ಧರ್ಮಗುರು ಬಸವಣ್ಣ



ಗಣ ಧ್ವಜ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಪ್ರಪ್ರಥಮ

ಕಲ್ಯಾಣ ಪರ್ವ

2002ರ ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಏಪ್ರಿಲ್ 30, ಮೇ 1 ಮತ್ತು 2 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 1 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ(ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ/ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

Digitalised by e Sahithya Documentataion Forum
Sponsored by Sarayu Foundation Trust

ಬನ್ನಿ ಕಲ್ಯಾಣ ಪರ್ವಕೆ

ಬನ್ನಿ ಬನ್ನಿ ನೋಡಬನ್ನಿ ಬಸವ ಕಲ್ಯಾಣವ
ಬನ್ನಿ ಬನ್ನಿ ಹಾಡಬನ್ನಿ ಶರಣಸ್ಮರಣ ಗೀತೆಯ ॥ಪ॥

ಗುರು ಬಸವಣ್ಣನ ಕಾರ್ಯಕ್ಷೇತ್ರ ಕಲ್ಯಾಣ
ಮಹಾಮನೆ ಹೊಂದಿದ್ದ ದಿವ್ಯ ತಾಣ ಕಲ್ಯಾಣ
ಅನುಭವ ಮಂಟಪವ ಹೊಂದಿ, ಅಂದು ಮೆರೆದ ಕಲ್ಯಾಣ
ಲಿಂಗದೇವ ಲೀಲೆ ಹಾಡ್ದ ಶರಣ ಭೂಮಿ ಕಲ್ಯಾಣ ॥1॥

ಕಲ್ಯಾಣ ಪ್ರಣತೆಯಾಗಿ ಭಕ್ತಿರಸವೆ ತೈಲವಾಗಿ
ಆಚಾರ ಬತ್ತಿವಿಡಿದು ಬೆಳಗಿ ತಂದು ಬಸವ ಜ್ಯೋತಿ
ಶಿವನ ಪ್ರಕಾಶದಲಿ ಬಾಳ ಹಣತೆ ಬೆಳಗಿಕೊಂಡು
ಶರಣ ಗಣವು ಕೂಡಿತಂದು ವಚನ ಜೇನು ನೀಡುತಲಿ ॥2॥

ಕಲ್ಯಾಣ ನಾಡಿನಲಿ ಅಂದು ಒಂದು ಕ್ರಾಂತಿಯಾಗಿ
ಧರ್ಮಪಿತರು ನಡೆದರು ಗಡಿಪಾರಿನ ದಂಡಗೊಂಡು
ಹರಳಯ್ಯ-ಮಧುವಯ್ಯ-ಶೀಲವಂತ ಶರಣರು
ಹರಣ ತೆತ್ತು ಹಾಡಿದರು ಬಸವ ತತ್ತ್ವ ಕ್ರಾಂತಿ ಗೀತ ॥3॥

ವಚನ ಸಿರಿಯ ರಕ್ಷಿಸಲು ಶರಣ ಗಣವು ನಿಂತಿತು
ತನುಮನ ಪ್ರಾಣಗಳ ಪಣಕ್ಕಿಟ್ಟು ಹೋರಾಡಿತು
ಹುತಾತ್ಮರಾದ ಶರಣರ ಸಂಕಲ್ಪ ಪೂರೈಸಲು
ಇಂದು ಅವರ ಬೆಳಕನು ತರುವಾ ಕಲ್ಯಾಣಕೆ ॥4॥

ವಿಶ್ವಕಾಯಕದ ದಿನ ನಡೆಯುತಿದೆ ಕಲ್ಯಾಣ ಪರ್ವ
ನಾಡ ಮೂಲೆ ಮೂಲೆಯಿಂದ ಬನ್ನಿ ಶರಣ ಬಂಧುಗಳೇ
ಬಸವ ಕರುಳ ಕುಡಿಗಳನ್ನು ಬೆಸೆಯುವ ಹಬ್ಬವಿದು
ವಚನ ಪರ್ವ, ತತ್ತ್ವ ಪರ್ವ, ಕಮ್ಮನೆಯ ಶರಣ ಪರ್ವ ॥5॥

ತಮಿಳು ನಾಡು, ತೆಲುಗು ನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬನ್ನಿರೆಲ್ಲ ಕಲ್ಯಾಣಕೆ
ನಾವು ನೀವು ಎಲ್ಲ ಸೇರಿ ಶರಣರನ್ನು ಸ್ಮರಿಸುವಾ
ಛಲವ ತೊಟ್ಟು ಕಟ್ಟುವ ಮತ್ತೆ ನವಕಲ್ಯಾಣ ॥6॥

– ಬಸವಾತ್ಮಜೆ

"ವಚನ ಶಾಸ್ತ್ರದ ಬತ್ತಳಿಕೆಯಲ್ಲಿ ಜೀವನದ ಸಮಸ್ಯೆಯ ಶತ್ರುಗಳನ್ನೆಲ್ಲಾ ಸಂಹರಿಸುವ ಬಾಣಗಳಿವೆ." ಅದು ಜೀವನದ ಸಾರಸರ್ವಸ್ವದ ನಿಧಿ.

–ಮಾತಾಜಿ

ವಚನ ವಿಶ್ಲೇಷಣೆ :

ಯುಗದ ಉತ್ಸಾಹ

– ಮಾತಾಜಿ

ಯುಗದ ಉತ್ಸಾಹವ ನೋಡಿರೆ !
ಪಂಚ ಶಕ್ತಿಗಳಿಗೆ ಪಂಚ ಪ್ರಧಾನರು
ಅವರ ಆಗುಹೋಗನಾ ಶರಣನೆ ಬಲ್ಲ
ಆ ಶರಣನು ತಾನು ತಾನಾಗಿ ಆರುದರುಶನಕ್ಕೆ ಯಾಚಕನಲ್ಲ
ಮೂರುದರುಶನಕ್ಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರಾಗಮ ಪುರಾಣ ಛಂದಸ್ಸು
ನಿಘಂಟುಗಳೆಂಬುವಕ್ಕೆ ಭೇದಕನಲ್ಲ, ಅದೆಂತೆಂದಡೆ :
ಅವರಂಗದ ಮೇಲೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ,
ಪ್ರಸಾದವಿಲ್ಲ ಪಾದೋದಕವಿಲ್ಲದ ಭಾಷೆ.
ಈ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವು ಪ್ರಣಾಮಂಗೈಯ್ಯುತ್ತಿದ್ದವು.
ಜೀವಿಗಳೆಲ್ಲವೂ ಜಯ ಜೀಯಾ ಎನ್ನುತ್ತಿದ್ದವು.
ಆತ್ಮಂಗಳೆಲ್ಲಾ ಅನುವ ಬೇಡುತ್ತಿದ್ದವು.
ಗುಹೇಶ್ವರಾ, ಸಂಗನಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ ಜೀಯಾ ಎನುತ್ತಿದ್ದವು. – (ಅ.ಪ್ರ.ವ : 938)

ಅಲ್ಲಮ ಪ್ರಭುದೇವರು ಹೃದಯ ತುಂಬಿ ಹೇಳುವ ಮಾತುಗಳಿವು. ಧರ್ಮಪಿತ ಬಸವಣ್ಣನವರ ಬರುವು, ಇರುವು ಒಂದು ರೀತಿಯಲ್ಲಿ ಯುಗದ ಉತ್ಸವವೇ ಆಯಿತು. ಮಾನವ ಜನಾಂಗದ ಇತಿಹಾಸದಲ್ಲಿಯೇ ಅಪೂರ್ವವಾದ ವ್ಯಕ್ತಿ ಬಸವಣ್ಣನವರು. 'ಉತ್ಸಾಹ' ಎಂಬ ಪದವೂ ಪಾಠಾಂತರದಲ್ಲಿ ಲಭ್ಯವಿದೆ. ನಿಜ ; ಬಸವಣ್ಣನವರ ಬರವಿನಿಂದ ಒಂದು ಬಗೆಯ ಉತ್ಸಾಹ ಎಲ್ಲರಲ್ಲಿ ಮೂಡಿತು. ಬೆಂದು ಬಸವಳಿದಿದ್ದ ಅಸಂಖ್ಯಾತ ಹೃದಯಗಳು ವಚನ ವಾಹಿನಿಯ ಸ್ಪರ್ಶದಿಂದ ಪುನರ್ಜನ್ಮವನ್ನು ಪಡೆದವು. ಅತ್ಯಂತ ಕೆಳಸ್ತರದಲ್ಲಿ ದೈನ್ಯಾವಸ್ಥೆಯಲ್ಲಿದ್ದ ಅಸ್ಪೃಶ್ಯರು, ಶೂದ್ರರು ಮಾತ್ರವಲ್ಲ ನಿರಂತರವಾಗಿ ಶೋಷಣೆಗೆ ಒಳಗಾಗಿದ್ದ ಸ್ತ್ರೀಯರು ಎಲ್ಲರೂ ಬಸವ ಗುರುವಿನ ತತ್ತ್ವದ ಆಶ್ರಯ ಪಡೆದು ಪುಳಕಿತ ಚೇತನರಾದರು. ಕಗ್ಗತ್ತಲೆಯಲ್ಲಿ ಕಣ್ಣು ಕಾಣದೆ ತಡವರಿಸುತ್ತಿದ್ದವರು ಬೆಳಕಿನ ಧಾರೆಯಲ್ಲಿ ಉತ್ಸಾಹ ಚೇತನರಾಗಿ ಮುನ್ನಡೆಯಲು ಸಮರ್ಥರಾದರು. ಇದನ್ನೇ ಅಲ್ಲಮ ಪ್ರಭುಗಳು ಯುಗದ ಉತ್ಸಾಹ ಎಂದು ಬಣ್ಣಿಸಿದ್ದಾರೆ.

ಬಸವಣ್ಣನವರ ಬೋಧೆಯ ಮೂಲಭೂತ ತತ್ತ್ವವೇ ದೇವರು. ಸೃಷ್ಟಿಕರ್ತನಾದ ಪರಮಾತ್ಮನು ಐದು ಮಹಾನ್ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾನೆ. ಅವೆಂದರೆ ಸೃಷ್ಟಿ - ಸ್ಥಿತಿ - ಲಯ - ತಿರೋದಾನ ಮತ್ತು ಅನುಗ್ರಹ. ಈ ಪರಮಾತ್ಮನಿಗೆ 5 ಮುಖಿಗಳು ಅವೇ ಅವನ ಸ್ವರೂಪ ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ. ಈ ಐದು ಮುಖಿಗಳಿಗೆ 5 ಹೆಸರು ಕೊಡಲಾಗಿದೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ.

Digitalised by e Sahithya Documentataion Forum
Sponsored by Sarayu Foundation Trust

ಇಂಥ ಸೃಷ್ಟಿಕರ್ತನು 5 ಕಾರ್ಯಗಳನ್ನು ನಿರ್ವಹಿಸಲು ತನ್ನಲ್ಲಿ ಅಂತರ್ಗತವಾಗಿರುವ 5 ಶಕ್ತಿಗಳನ್ನು ಸಹಾಯಕ ಸಾಧನವಾಗಿ ಬಳಸುತ್ತಾನೆ. ಆ ಐದು ಶಕ್ತಿಗಳೇ ಪರಾ, ಆದಿ, ಜ್ಞಾನ, ಇಚ್ಛಾ, ಕ್ರಿಯಾ ಎಂಬುವು. ಹೀಗೆ ಒಬ್ಬನೇ ಆದ ಕರ್ತನು ಈ ಎಲ್ಲ ಸೃಷ್ಟಿಯ ಕರ್ತೃ ಮತ್ತು ಸೂತ್ರಧಾರ. ಹೀಗೆ ಪಂಚ ಪ್ರಧಾನ ತತ್ತ್ವಗಳು, ಅವುಗಳಿಗೆ ಅಧೀನವಾಗಿರುವ 5 ಶಕ್ತಿಗಳು-ಇವುಗಳಿಂದ ಈ ಸೃಷ್ಟಿ ಆಗಿದೆ. ಇದನ್ನು ಅರಿಯದೆ ಅಜ್ಞಾನಿಗಳು ಬ್ರಹ್ಮನು ಸೃಷ್ಟಿಕರ್ತ, ವಿಷ್ಣು ಪಾಲಕನು, ರುದ್ರನು ಲಯಕರ್ತನು ಎಂದು ತಪ್ಪು ತಪ್ಪಾಗಿ ಭಾವಿಸಿ ದೇವತೆಗಳ ಕಲ್ಪನೆ ಮಾಡಿಕೊಂಡಿದ್ದಾರೆ. ಇದನ್ನು ಖಂಡಿಸಿ ನಿಜ ದೇವನ ಪರಿಕಲ್ಪನೆ ನೀಡಿದವರು ಬಸವಣ್ಣನವರು.

ಶರಣ ಬಸವಣ್ಣನವರು ಸ್ವಯಂ ಕೃತರು (self-made) ತತ್ತ್ವ ಚಿಂತಕರು, ವಿಚಾರ ಶೀಲರು. ಅವರು ಸಾಂಪ್ರದಾಯಿಕ ಸೇಶ್ವರವಾದಿ ಷಡ್‌ದರ್ಶನಗಳಾದ ಸಾಂಖ್ಯ-ಯೋಗ, ನ್ಯಾಯ-ವೈಶೇಷಿಕ, ಪೂರ್ವ ಮೀಮಾಂಸ-ಉತ್ತರ ಮೀಮಾಂಸ ಎಂಬ ಷಡುದರ್ಶನಗಳನ್ನು ಜ್ಞಾನಕ್ಕಾಗಿ, ಅನುಭಾವಕ್ಕಾಗಿ ಬೇಡಲು ಹೋಗಲಿಲ್ಲ. ಅದೇ ರೀತಿ ನಿರೀಶ್ವರವಾದಿ ದರ್ಶನಗಳಾದ ಚಾರ್ವಾಕ, ಬೌದ್ಧ, ಜೈನ ಎಂಬ ದರ್ಶನಗಳನ್ನು ಪ್ರೀತಿಸಲಿಲ್ಲ. ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ, ಪೋಷಕವಾಗುವ ವೇದ, ಶಾಸ್ತ್ರ, ಆಗಮ, ಪುರಾಣ, ಛಂದಸ್ಸು, ನಿಘಂಟು ಎಂಬುವುಗಳ ಬೆನ್ನುಹತ್ತಿ ಸಾಗಲಿಲ್ಲ. ಏಕೆಂದರೆ ಈ ಯಾವ ಶಾಸ್ತ್ರಗಳು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ಎಂಬ ಪಂಚ ತತ್ತ್ವಗಳನ್ನು ಒಪ್ಪಿಕೊಂಡು ಆಚರಿಸಲಿಲ್ಲ.

ಧರ್ಮಪಿತ ಬಸವಣ್ಣನವರು ಕೊಟ್ಟುದು 5 ಪಥ (lane) ಗಳಿಂದ ಕೂಡಿದ ಹೆದ್ದಾರಿ.

1. ಪ್ರತಿಯೊಬ್ಬ ಮಾನವನಿಗೂ ಗುರುಕಾರುಣ್ಯ, ಧರ್ಮಸಂಸ್ಕಾರ ಸಿಗುವಂತೆ ಆಗಬೇಕು. ಬೀಜವನ್ನು ಬಿತ್ತದ ಹೊರತು ಅದರ ಸತ್ವ ತಿಳಿಯದು. ಈ ಗುರು ಕಾರುಣ್ಯ ಐಚ್ಛಿಕ (optional) ಆಗಿರದೆ ಕಡ್ಡಾಯವಾಗಿ ಲಭ್ಯವಾಗಬೇಕು.

2. ದೇವರು ನಿರಾಕಾರನು, ನಿರ್ಗುಣನು. ಅಂಥ ದೇವರನ್ನು ಸದಾ ನೆನೆಯಬೇಕು, ಸ್ಮರಿಸಬೇಕು. ಅವನನ್ನು ಬಿಟ್ಟು ತಾನಿಲ್ಲ ಎಂಬ ಭಾವ ಬೆಳೆಯಬೇಕಾದರೆ ಲಿಂಗದೇವನ ಕುರುಹಾದ ಇಷ್ಟಲಿಂಗ ಅಂಗದ ಮೇಲಿರಬೇಕು. ದೇವರನ್ನು ಹುಡುಕಿಕೊಂಡು ಸಾಧಕ ಎಲ್ಲಿಯೂ ಅಲೆಯಬೇಕಾಗಿಲ್ಲ, ಪೂಜೆಯ ಹಕ್ಕಿನಿಂದ ವಂಚಿತನಾಗಬೇಕಾಗಿಲ್ಲ, ಗುಡಿಗಳಿಗೆ ಹೋಗಿ ತಿರಸ್ಕೃತನಾಗಬೇಕಾಗಿಲ್ಲ. ಇಷ್ಟಲಿಂಗವನ್ನು ಧರಿಸಿದವರೆಲ್ಲರೂ ಸಮಾನರು. ಅವರಲ್ಲಿ ವರ್ಣ, ವರ್ಗ, ಜಾತಿ, ಲಿಂಗ ಭೇದ ವಿಡಿದು ಮೇಲು ಕೀಳು ಎನ್ನಬಾರದು.

3. ಜಂಗಮ : ತ್ಯಾಗಿ, ಯೋಗಿ, ವಿರಕ್ತನೂ ಆದ ಜಂಗಮನು ಸಮಾಜದ ಹಿತಚಿಂತಕನು, ಜಾತಿವರ್ಣವರ್ಗ ಭೇದರಹಿತ ಸಮಾಜ ವ್ಯವಸ್ಥೆಯಲ್ಲಿ ಜಂಗಮನ ಪಾತ್ರ ಬಹುಮುಖ್ಯ. ಭಕ್ತನಿಗೆ ಗುರುವಾಗುತ್ತಾನೆ, ಬಂಧುವಾಗುತ್ತಾನೆ, ಹಿತೈಷಿಯಾಗುತ್ತಾನೆ. ಈತ ಸಮಾಜ ಸುಧಾರಕನೂ ಅಹುದು. ವಿಭಿನ್ನ ಮೂಲಗಳಿಂದ ಬಂದ ಭಕ್ತರ ನಡುವೆ ಭಿನ್ನಭಾವ, ವ್ಯತ್ಯಾಸ ಅಳಿಯಲು ಜಂಗಮನು ಸಹಾಯ ಸಾಧನ.

ಹೀಗೆ ಗುರು (ಧರ್ಮಗುರು ಬಸವಣ್ಣನವರು ಮತ್ತು ದೀಕ್ಷಾಗುರು ಉಭಯತರು)-ಲಿಂಗ-ಜಂಗಮ ಮೂರೂ ಅನುಯಾಯಿಯಾದ ಭಕ್ತನಿಗೆ ಪೂಜ್ಯ ವಸ್ತುಗಳು ಮತ್ತು ದಿವ್ಯ

ಮಾರ್ಗದರ್ಶಿಗಳು. ಈ ಗುರು-ಲಿಂಗ-ಜಂಗಮಗಳ ಅನುಗ್ರಹವು ಪಾದೋದಕ-ಪ್ರಸಾದವ ಮೂಲಕ ಹರಿದು ಬಂದು ಭಕ್ತನನ್ನು ಉದ್ಧರಿಸುತ್ತವೆ. ವೈದಿಕ-ಶೈವ ಧರ್ಮದ ತೀರ್ಥಕ್ಕೂ ಲಿಂಗಾಯತ ಧರ್ಮದ ಪಾದೋದಕಕ್ಕೂ ಬಹಳ ವ್ಯತ್ಯಾಸವಿದೆ. ಅದೇ ರೀತಿ ವೈದಿಕ-ಹಿಂದೂ ಧರ್ಮದಲ್ಲಿ ಪೂಜಾರಿಯು ಕೊಡುವ ದೇವರ 'ಪ್ರಸಾದ'ಕ್ಕೂ ಲಿಂಗಾಯತ ಧರ್ಮದಲ್ಲಿ ಗುರು-ಜಂಗಮರು ಕೊಡುವ ಕರುಣ ಪ್ರಸಾದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿ ಪೂಜಾರಿ-ಭಕ್ತರ ನಡುವೆ ಅಸಮಾನತೆ ಇದ್ದರೆ ಲಿಂಗಾಯತ ಧರ್ಮದಲ್ಲಿ ಗುರು ಮುಟ್ಟಿ ಗುರುವಾಗುವ ತತ್ತ್ವವಿದೆ. ಸಮಾನತೆ ಇದೆ ; ಜ್ಯೋತಿಯು ಇನ್ನೊಂದು ಉರಿಯದೆ ಇರುವ ದೀಪವನ್ನು ಮುಟ್ಟಿ ಅದನ್ನೂ ಜ್ಯೋತಿಯನ್ನಾಗಿ ಬೆಳಗುವಂತೆ ಮಾಡುವ ಕಳಕಳಿ ಇದೆ. ಹೀಗೆ ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದಗಳೆಂಬ 5 ಪಥಗಳಿರುವ ಹಾದಿಯನ್ನು ಧರ್ಮಪಿತ ಬಸವಣ್ಣನವರು ಎಲ್ಲರಿಗೂ ಕೊಟ್ಟಿದ್ದಾರೆ. ಇದರಿಂದಾಗಿ -

(1) ಪ್ರಾಣಿಗಳೆಲ್ಲವೂ ಬಸವಣ್ಣನವರಿಗೆ ಪ್ರಣಾಮಗೈಯುತ್ತಿದ್ದರೆ (2) ಸಮಸ್ತ ಜೀವಿಗಳೂ ಜಯಾ ಜೀಯಾ ಎಂದು ಕೊಂಡಾಡುತ್ತಿವೆ. (3) ಎಲ್ಲ ಆತ್ಮರುಗಳು ಅನುವು ಅಂದರೆ ಆಶ್ರಯ, ನೆರವು ಬೇಡುತ್ತಿವೆ. ಮತ್ತು ಹದಿನಾಲ್ಕು ಲೋಕಗಳ ಜನರೂ ಬಸವಣ್ಣನವರ ಪುಣ್ಯ ಸ್ಮರಣೆಯನ್ನು ಕೃತಜ್ಞತೆಯಿಂದ ಮಾಡುತ್ತಿದ್ದಾರೆ. ಈ ಮೂರು ಮಾತುಗಳು ಬಹಳ ವಿಶೇಷವಾಗಿವೆ.

ಪ್ರಾಣಿಗಳೆಲ್ಲ ಏಕೆ ಪ್ರಣಾಮಗೈಯುತ್ತಿವೆ ? ಅನಾಗರಿಕ ಮಾನವ ತನ್ನ ಹೊಟ್ಟೆಯ ತೃಪ್ತಿಗಾಗಿ ಪ್ರಾಣಿಗಳನ್ನು ವಧಿಸಿ ತಿನ್ನುತ್ತಿದ್ದ. ಮುಂದೆ ಕೃಷಿ ಬೆಳೆಯಿತು. ದವಸ-ಧಾನ್ಯಗಳು ಕ್ಷುಧಾ ತೃಪ್ತಿಗಾಗಿ ಲಭ್ಯವಿದ್ದರೂ ಮಾನವ ನಾಲಿಗೆಯ ಚಪಲಕ್ಕಾಗಿ ಪ್ರಾಣಿಗಳನ್ನು ಕೊಂದು ಮಾಂಸಾಹಾರ ಮಾಡತೊಡಗಿದ. ಮೊಟ್ಟ ಮೊದಲ ಬಾರಿಗೆ ಶಿವ, ನಂತರ ಬುದ್ಧ - ಮಹಾವೀರರು ಅಹಿಂಸಾ ಪ್ರಧಾನ ಧರ್ಮದ ಬೋಧೆ ಮಾಡಿದರು, ಸಸ್ಯಾಹಾರಕ್ಕೆ ಮಹತ್ವ ಕೊಟ್ಟರು. ನಂತರ ಅಹಿಂಸೆ ಮತ್ತು ಸಸ್ಯಾಹಾರ ಬೋಧಿಸಿದ ಮಹಾತ್ಮರು ಬಸವಣ್ಣನವರು. ಇಂದು ಅವರನ್ನು ಅನುಸರಿಸುವ ಲಿಂಗಾಯತರು ಮತ್ತು ಅವರ ತತ್ತ್ವದ ಪ್ರಭಾವಕ್ಕೆ ಒಳಗಾದ ಲಿಂಗಾಯತೇತರರು ಸಸ್ಯಾಹಾರಿಗಳಾಗಿದ್ದಾರೆ. ಇದರಿಂದ ಬಹಳ ಪ್ರಾಣಿಗಳ ಜೀವಗಳು ಉಳಿದವು. ಆಯುಷ್ಯ ತೀರಿ ಸಹಜ ಸಾವು ಬರುವವರೆಗೆ ಆ ಪ್ರಾಣಿಗಳು ಬದುಕಲು ಅವಕಾಶ ದೊರೆಯಿತು. ಹೀಗಾಗಿ ಆ ಪ್ರಾಣಿಗಳು "ಬಸವಣ್ಣಾ ನಿನ್ನ ಅಹಿಂಸಾ ತತ್ತ್ವದಿಂದಾಗಿ ಬಲಿಯಾಗುತ್ತಿದ್ದ ಎಷ್ಟೋ ಪ್ರಾಣಿಗಳು ಉಳಿದವು. ಅದಕ್ಕಾಗಿ ನಮಿಸುತ್ತೇವೆ" ಎನ್ನುವುದರಲ್ಲಿ ಆಶ್ಚರ್ಯವೇನಿದೆ ?

ಬಸವಣ್ಣನವರ ದಯಾ ತತ್ತ್ವ ಪ್ರಾಣಿಗಳಿಗೆ, ಮಾನವರಿಗೆ ಅಷ್ಟೇ ಅನ್ವಯವಾಗದೆ ಗಿಡಮರಬಳ್ಳಿಗಳಿಗೆ ಸಹ ವಿಸ್ತರಿಸಿತು. ಪೂಜೆಗಾಗಿ ಗಿಡಮರಗಳನ್ನು ಪ್ರಾಣಿಗಳಂತೆ ತರೆಯುವ ಅಮಾನುಷ ಪ್ರವೃತ್ತಿ ಜರಿದು ಅವುಗಳೊಡನೆ ಸಹ ಮೃದುವಾಗಿ ವ್ಯವಹರಿಸಲು ಹೇಳಿದರು. "ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ" ಎಂದರು. "ಶಿಶುವನಗಲಿಸಿ, ತಾಯ

Digitalised by e Sahithya Documentataion Forum
Sponsored by Sarayu Foundation Trust

ಪುರುಗಿಸಿ ಹಾಲ ಕರೆದು ಉಣ ಬೇಡವೊ'' ಎಂದು ಹಸು-ಕರುಗಳಂತಹ ಜೀವಿಗಳ ಬಗ್ಗೆ ಮರುಕ ತೋರಿದರು. ಹೀಗಾಗಿ ಸಮಸ್ತ ಜೀವಿಗಳು ಬಸವಣ್ಣನವರನ್ನು ಕೊಂಡಾಡುವುದರಲ್ಲಿ ಆಶ್ಚರ್ಯವೇನಿದೆ ?

ಆತ್ಮಗಳು ಅನುವ ಬೇಡುತ್ತಿವೆ. ಅಸ್ಪೃಶ್ಯರು ದಲಿತರು ತೀರಾ ಶೋಷಿತರಾಗಿ, ನೊಂದು ನಲುಗಿದರು. ಅವರಿಗೆ ಬಸವಣ್ಣನವರ ತತ್ತ್ವ ಮಂದಿರದಲ್ಲಿ ಅನುವು (ಆಶ್ರಯ) ಸಿಕ್ಕಿತು. ಶೂದ್ರರು ಇವರಿಗಿಂತ ಸಾಮಾಜಿಕವಾಗಿ ಮೇಲಿದ್ದರೂ ಹುಟ್ಟಿನಿಂದ ಸಾಯುವವರೆಗೆ ಅವರಿಗೆ ಯಾವುದೇ ಧರ್ಮ ಸಂಸ್ಕಾರ ಇರಲಿಲ್ಲ. ಇವರಿಗೆ ಧಾರ್ಮಿಕ ಸಂಸ್ಕಾರ ಮತ್ತು ತನ್ಮೂಲಕ ಸಮಾನತೆ ಸಿಕ್ಕಿತು. ಇನ್ನು ಮಹಿಳೆಯರ ಪರಿಸ್ಥಿತಿ ಇನ್ನೂ ಗಂಭೀರವಾಗಿದ್ದಿತು. ಎಲ್ಲ ವರ್ಣಗಳ ಸ್ತ್ರೀಯರೂ ಶೂದ್ರರೆ! ಧರ್ಮಸಂಸ್ಕಾರಕ್ಕೆ ಹೊರತು! ಪುರುಷನ ದಾಸಿ, ಭೋಗದ ಗೊಂಬೆಯ ಸ್ಥಾನ ಅವಳದು. ಆದರೆ ಬಸವಣ್ಣನವರ ಪರಿಕಲ್ಪನೆಯ ಮಹಿಳೆ ಜೀವನ ಸಂಗಾತಿ (Life partner) ವಿಚಾರ ಪತ್ನಿ (intellectual companion). ಆಕೆಗೆ ಧಾರ್ಮಿಕ ಸಂಸ್ಕಾರ, ಸಮಾನತೆ, ಸಾಮಾಜಿಕ ಸ್ಥಾನಮಾನ ಲಭ್ಯವಾದುವು. ಹೀಗಾಗಿ ಎಲ್ಲ ಆತ್ಮಗಳು ಬಸವಣ್ಣನವರ ಅನುವು (ಸಹಾಯ-ಆಶ್ರಯ) .ಬೇಡುವುದರಲ್ಲಿ ಉತ್ಪ್ರೇಕ್ಷೆ ಏನಿದೆ ? ಅದಕ್ಕೆ 14 ಲೋಕಗಳ ಜನರೂ ಅವರನ್ನು ಕೊಂಡಾಡುತ್ತಾರೆ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುಗಳ ಅಭಿಪ್ರಾಯದಲ್ಲಿ ಬಸವಣ್ಣನವರು ಓರ್ವ ಯುಗಪುರುಷರು, ಅವರ ಬರುವೇ ಯುಗದ ಉತ್ಸವ. ಅವರಿಂದ ಯುಗಕ್ಕೆ ಉತ್ಸಾಹ ಬಂದಿತು. ಆದ್ದರಿಂದ 2ನೆಯ ಸಹಸ್ರ ಮಾನದ (1001-2000) ಮಹಾನ್ ಪುರುಷ ಬಸವಣ್ಣನವರಲ್ಲದೆ ಬೇರಲ್ಲ ಎಂದು ಅಲ್ಲಮ ಪ್ರಭುದೇವರಂಥ ಮಹಾಮಹಿಮರೇ ಹಾಡಿರುವಾಗ ನಾವೂ ''ಅಹುದು'' ಎಂದು ಹಿಮ್ಮೇಳದಲ್ಲಿ ದನಿ ಗೂಡಿಸಿ ಹಾಡಿದರೆ ಒಳ್ಳಿತು ಎನ್ನಿಸುವುದಲ್ಲವೆ ?

ಸೇವಾವ್ರತಿಗಳು ಬೇಗನೆ ಬರಲು ಕರೆ

ಬಸವ ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವದ ಸಿದ್ಧತೆಗೆ ನೆರವಾಗಲು ಸ್ವಯಂ ಸೇವಕರ ಅಗತ್ಯ ಬಹಳವಿದೆ. ಕೂಡಲ ಸಂಗಮದ ಶರಣ ಮೇಳದಲ್ಲಿ ಬೆಳಗಾಂ, ಬೀದರ್ ಜಿಲ್ಲೆ ಮತ್ತು ಮಹಾರಾಷ್ಟ್ರದ ಕೆಲವು ಜಿಲ್ಲೆಗಳವರು ಬಹಳ ವಿಶೇಷ ಕಾಳಜಿಯಿಂದ ದುಡಿಯುತ್ತಾರೆ. ಅಲ್ಲಿಯ ಕಾರ್ಯಕರ್ತರಿಗೆ ಬಸವ ಕಲ್ಯಾಣ ಹೆಚ್ಚು ದೂರ. ಆದ್ದರಿಂದ ಬೀದರ್-ಗುಲಬರ್ಗಾ ಜಿಲ್ಲೆಯ ಸ್ವಯಂ ಸೇವಕರು ಆದಷ್ಟು ಬೇಗನೆ ದಿ. 13-4-2002 ರಂದು ಯುಗಾದಿ ಮುಗಿಸಿಕೊಂಡು ಮರುದಿನ ಹೊರಟು ಬಂದರೆ ಒಳ್ಳೆಯದು. ಆದ್ದರಿಂದ ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರುತ್ತೇವೆ.

ಶರಣ. ಹೆಚ್. ಎಸ್. ಬಸವರಾಜ್ — ಶರಣ. ಜಿನಕೇರಿ ಷಡಕ್ಷರಪ್ಪ

ಕಲ್ಯಾಣ ಕಿರಣದ ಪ್ರತಿಗಳು ಎರಡು ಬರುತ್ತಿದ್ದರೆ ಒಂದನ್ನು ಸ್ವೀಕರಿಸಿ, ಇನ್ನೊಂದನ್ನು ನಿರಾಕರಿಸಿರಿ. ತ್ವರಿತ ವ್ಯವಹಾರಕ್ಕಾಗಿ ಬಸವ ಮಂಟಪ ರಾಜಾಜಿನಗರ ಬೆಂಗಳೂರು ವಿಳಾಸಕ್ಕೆ ಸಂಪರ್ಕಿಸಿರಿ. -ವ್ಯವಸ್ಥಾಪಕರು

ಜ್ಯೋತಿ ಯಾತ್ರೆ ತಂದ ಚೈತನ್ಯ

-ಮಾತಾಜಿ

ಎಮ್ಮ ತಾಯಿ ನಿಂಬವ್ವೆ : ನೀರನೆರೆದುಂಬುವಳು ;
ಎಮ್ಮಯ್ಯ ಚನ್ನಯ್ಯ : ರಾಯಕಂಪಣವ ಹೊರುವ -
ಎಮಗಾರೂ ಇಲ್ಲವೆಂಬಿರಿ -
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು ;
ಎಮಗಾರೂ ಇಲ್ಲವೆಂಬಿರಿ.
ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಲಿಂಗದೇವಾ. ಬ.ವ.ದೀ.- 353

ಮಾರ್ಚ್ ತಿಂಗಳಲ್ಲಿ ಬಹಳ ಪ್ರವಾಸವಾಯಿತು. ಆದರೆ ಪ್ರವಾಸವನ್ನು ಮುಗಿಸಿ ಬಂದಾಗ ಒಂದು ಬಗೆಯ ಸಂತೋಷ ಮತ್ತು ಸಂತೃಪ್ತಿ ಎನ್ನಿಸಿ ಮೇಲಿನ ವಚನ ಧರ್ಮಪಿತರದು ನೆನಪಿಗೆ ಬಂದಿತು.

ಈ ವಚನವನ್ನು ಧರ್ಮಪಿತರು ಹೃದಯ ತುಂಬಿ ನುಡಿದಿದ್ದಾರೆ. ಈ ವಚನವನ್ನು ಸಾಕ್ಷಾತ್ಕಾರ ಮತ್ತು ಇಷ್ಟಲಿಂಗ ಆವಿಷ್ಕಾರದ ನಂತರ ಬರೆದಿದ್ದಾರೋ ಅಥವಾ ಪೂರ್ವದಲ್ಲಿ ಬರೆದಿದ್ದಾರೋ ಎಂದು ಚಿಂತಿಸಿದರೆ, ನಂತರದ್ದು ಎನಿಸುತ್ತಿದೆ. ಹೇಗೆಂದರೆ, ''ಎಮಗಾರೂ ಇಲ್ಲವೆಂಬಿರಿ, ಎಮಗಾರೂ ಇಲ್ಲವೆಂಬಿರಿ'' ಎಂಬ ಮಾತುಗಳು ಧರ್ಮಪಿತರು ವೈಯಕ್ತಿಕವಾಗಿ ವೈದಿಕ ಸಂಪ್ರದಾಯದ ಪಾಲಕರಾದ ತಾಯಿ ತಂದೆ ಬಂಧು ಬಳಗವನ್ನು ತೊರೆದುದು ಮಾತ್ರವಲ್ಲ, ಹೊಸ ಧರ್ಮ - ಲಿಂಗಾಯತವನ್ನು ಕೊಡುವ ಮೂಲಕ ವೈದಿಕ ಧರ್ಮಕ್ಕೆ ಸಂಪೂರ್ಣವಾಗಿ ಹೊರಗಾಗಿದ್ದಾರೆ. ಹೀಗಾಗಿ ಸಂಪ್ರದಾಯವಾದಿಗಳಾದ ಶಾಸ್ತ್ರಿ - ಪಂಡಿತರು, ''ಇವರಿಗೆ ಹಿಂದಿಲ್ಲ; ಯಾವುದೇ ಪುರಾತನ ನಂಟಿಲ್ಲ'' ಎಂದು ಚುಚ್ಚಿ ಮಾತನಾಡುತ್ತಾರೆ. ಆಗ ಧರ್ಮಗುರು ಬಸವಣ್ಣನವರು ತಮ್ಮನ್ನು ತಾವು ಒಂದು ವಿಶಿಷ್ಟ ಪರಂಪರೆಯೊಡನೆ ಗುರುತಿಸಿಕೊಳ್ಳುತ್ತಾರೆ, ಬೆಸೆದುಕೊಳ್ಳುತ್ತಾರೆ. ಹೆಮ್ಮೆಯಿಂದ ಹೇಳುತ್ತಾರೆ, ''ನಾನು ಇವರ ಪರಂಪರೆಯವನು.'' ಎಂದು. ಇನ್ನೊಂದು ವಚನ ಹೀಗಿದೆ :

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು.
ಬಾಣನವ ನಾನು, ಮಯೂರನವ ನಾನು
ಕಾಳಿದಾಸನವ ನಾನು !
ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ, ಚನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ, ಕೂಡಲ ಸಂಗಯ್ಯ.

ಬಾಣ, ಮಯೂರ, ಕಾಳಿದಾಸ, ಕಣ್ಣಪ್ಪ, ಸಿರಿಯಾಳ, ಸಿಂಧು ಬಲ್ಲಾಳ, ನಿಂಬವ್ವೆ ಚನ್ನಯ್ಯ-ಇವರೆಲ್ಲರೂ ಶಿವ ಪರಂಪರೆಯವರು, ಭಕ್ತಿ ಜೀವಿಗಳು ಇವರೊಡನೆ ಬಸವಣ್ಣನವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

Digitalised by e Sahithya Documentataion Forum
Sponsored by Sarayu Foundation Trust

ಸಿರಿಯಾಳ, ಸಿಂಧುಬಲ್ಲಾಳರ ಭಾವುಕ ಅತಿರೇಕದ ಭಕ್ತಿಯನ್ನು ಕಟುವಾಗಿ ಟೀಕಿಸಿ, "ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ" ಎಂದು ಆ ಮಾರ್ಗದಿಂದ ದೂರವಿರಲು ಎಚ್ಚರಿಕೆ ನೀಡಿದರೂ ಸಿರಿಯಾಳ, ಕಣ್ಣಪ್ಪ, ಬಾಣ ಮುಂತಾದವರ ಬಗ್ಗೆ ಒಂದು ರೀತಿಯ ಪ್ರೀತಿ, ಅಭಿಮಾನ. ಇದಕ್ಕೆ ಏನು ಪ್ರೇರಣೆ ?

ಭಾರತ ದೇಶದಲ್ಲಿ ಹರನು ಮೂಲಿಗನಾಗಿ ಬಂದ ಶಿವ ಪರಂಪರೆ ಬಹಳ ಪುರಾತನ, ಹಿಮಾಲಯದಲ್ಲಿ ಹರಿವ ಗಂಗೆಯಂತೆ ಸ್ಫಟಿಕ ಶುಭ್ರ. ಅದು ಭಕ್ತಿ ಪ್ರಧಾನ. ಆರ್ಯರ ಆಗಮನ ಸಾಮಾಜಿಕ, ಸಾಂಸ್ಕೃತಿಕ, ಶಾಸ್ತ್ರೀಯ ದಾಳಿ ಶಿವಪರಂಪರೆಯ ಸುಜಲವನ್ನು ಕಲಕಿತು. ವರ್ಣಾಶ್ರಮದ ಕಬ್ಬಿಣದ ಚೌಕಟ್ಟನ್ನು ಹೇರಿ ಅನೇಕರನ್ನು ತುಳಿಯಿತು. ಹೀಗಾಗಿ ಈ ದೇಶದಲ್ಲಿ ಎರಡು ಮಹಾನ್ ಧಾರ್ಮಿಕ ವಾಹಿನಿಗಳನ್ನು (ಹತ್ತು ಹಲವು ಕ್ಷುದ್ರ ಬಣಾಚರಣೆಗಳನ್ನು ಒಳಗೊಂಡ ಸಂಪ್ರದಾಯಗಳ ಜೊತೆಗೆ) ಕಾಣಬಹುದು. (1) ಯಜ್ಞ-ಯಾಗ, ಹೋಮ-ಹವನ, ಪಂಚಾಂಗ, ತಿಥಿ ಮೂಹೂರ್ತ ಮುಂತಾದವುಗಳಿಂದ ಕೂಡಿದ ಶೃತಿ-ಸ್ಮೃತಿ ಆಧಾರಿತ ವೇದಜಡರ ಕರ್ಮಮಾರ್ಗ (2) ದೇವಾಲಯ, ಪೂಜೆ, ಯೋಗ ಮುಂತಾದುವುಗಳಿಂದ ಕೂಡಿದ ಶಿವಭಕ್ತಿ ಪರಂಪರೆ. ಇದು ಯಜ್ಞ - ಯಾಗ, ಹೋಮ - ಹವನ ವಿರೋಧಿ ಮಾರ್ಗ. ದುರ್ದೈವವೆಂದರೆ, ಆರಂಭದಲ್ಲಿ ಉಭಯ ಮಾರ್ಗಗಳ ಮಧ್ಯೆ ಹೋರಾಟ ನಡೆದು ಸಾಕಷ್ಟು ಘರ್ಷಣೆ ಸಂಭವಿಸಿದರೂ ನಂತರ ಎರಡೂ ರಾಜಿಯಾಗಿ ಹಿಂದು ಎಂಬ ಸಂಕರ (hybrid) ತಳಿಯು ರೂಪುತಳೆದುದು. ವೈದಿಕದ ಕೊಳೆಯಾದ ನಿಸರ್ಗ ಪೂಜೆ, ಅಗ್ನಿ ಆರಾಧನೆ, ಪುರೋಹಿತ ಶಾಹಿಯನ್ನು ಶೈವವು ತನ್ನಲ್ಲಿ ಬೆರೆಸಿಕೊಂಡಿತು. ಹೀಗಾಗಿ ದೇವಾಲಯಗಳಲ್ಲಿ ಶಿವ ಮತ್ತು ಭಕ್ತರ ಮಧ್ಯೆ ಇದ್ದ ಭಕ್ತಿಯ ನಂಟು ತೊಲಗಿ, ಪೂಜಾರಿ ಎಂಬ ಮಧ್ಯವರ್ತಿ ಬಂದು ನಿಂತ. ಯಜ್ಞ - ಯಾಗ ವಿರೋಧಿಯಾದ ಶಿವನ ದೇವಾಲಯಗಳಲ್ಲಿ ಶಿವನ ಹೆಸರಿನಲ್ಲೇ ಯಜ್ಞ-ಯಾಗಗಳು ಆರಂಭವಾದುವು. ಹೀಗೆ ಮೂಲದಲ್ಲಿದ್ದ ಜೀವಂತಿಕೆಯನ್ನು, ಗತಿ ಶೀಲತೆಯನ್ನು ಶೈವವು ಕಳೆದುಕೊಂಡಾಗ ಬಸವಣ್ಣನವರು ವೈದಿಕ - ಶೈವ ಎರಡಕ್ಕೂ ಹೊರತಾದ ಹೊಸ ಮಾರ್ಗವೊಂದನ್ನು ಕಂಡು ಹಿಡಿದರು. ಹೀಗೆ ಅನ್ನುವುದಕ್ಕಿಂತ ಸಂಯೋಜಿಸಿ ಕೊಟ್ಟರು ಎಂದರೆ ಸೂಕ್ತವಾದೀತು. ಬಸವಣ್ಣನವರ ಧರ್ಮವು ಸಂಪೂರ್ಣವಾಗಿ ವೈದಿಕ ವಿರೋಧಿಯಾಗಿದ್ದರೆ ಶೈವದ ಬಗ್ಗೆ ಸ್ವಲ್ಪ ಅನುಕಂಪ ಉಳ್ಳುದಾಗಿದೆ.

ಶಿವಭಕ್ತಿ ಪರಂಪರೆ

ವರ್ಣಾಶ್ರಮ ವ್ಯವಸ್ಥೆಯ ಆಧಾರದ ಮೇಲೆ ನಿಂತ ವೈದಿಕ ಧರ್ಮವು ನಿರ್ಮಾಣ ಮಾಡಿದ ಅಸಹನೀಯ ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲೂ ಈ ದೇಶದಲ್ಲಿ ಧಾರ್ಮಿಕತೆಯನ್ನು ರಕ್ಷಿಸಿಕೊಂಡು ಬಂದುದು ಭಕ್ತಿ ಪರಂಪರೆ. ತಮಿಳುನಾಡಿನ 63 ಪುರಾತನರು ಆಳ್ವಾರರು, ನಯನಾರರು, ಮಹಾರಾಷ್ಟ್ರದ ಸಂತ ತುಕಾರಾಂ, ಜ್ಞಾನೇಶ್ವರರು, ಉತ್ತರದ ಕಬೀರದಾಸ, ಮೀರಾಬಾಯಿ ಮುಂತಾದವರು ಈ ಭಕ್ತಿ ಪರಂಪರೆಯಲ್ಲಿ ಬರುತ್ತಾರೆ. ಇವರು ಜಾತಿ ಮತ ಪಂಥಾತೀತವಾದ ಭಕ್ತಿ ಮಾರ್ಗದಲ್ಲಿ ಮುನ್ನಡೆದರು. ಈ ಭಕ್ತಿಪರಂಪರೆಯಲ್ಲಿ ಬಸವಣ್ಣನವರು

ತಮ್ಮನ್ನು ತಾವು ಶಿವಭಕ್ತಿ ಪರಂಪರೆಯೊಡನೆ ಗುರುತಿಸಿಕೊಳ್ಳುತ್ತಾರೆ. ಈ ಮೂಲಕ ಅದರ ಶ್ರೇಷ್ಠತೆಯನ್ನು, ಅನುಕರಿಸದಿದ್ದರೂ ಸೂಕ್ತವಾಗಿ ಎತ್ತಿ ಹಿಡಿಯುತ್ತಾರೆ.

1. ಕಾಳಿದಾಸ ಹುಟ್ಟಿನಿಂದ ಕುರುಬ, ಮಂದ ಮತಿಯಾಗಿದ್ದ ; ಆದರೆ ನಂತರ ಮಹಾಜ್ಞಾನಿಯಾದುದು ಭಕ್ತಿಯಿಂದಲೇ !

2. ಕಣ್ಣಪ್ಪ ಅನಾಗರಿಕ, ವೃತ್ತಿಯಿಂದ ಬೇಡ. ಅವನಿಗೆ ವೇದ ಶಾಸ್ತ್ರಗಳು ಗೊತ್ತಿಲ್ಲ ! ಪೂಜಾ ವಿಧಾನ ಗೊತ್ತಿಲ್ಲ. ಆದರೆ ತನ್ನ ಮುಗ್ಧ ಭಕ್ತಿಯಿಂದ ಪರಮ ಪದವಿ ಪಡೆದುಕೊಂಡ.

3. ನಿಂಬವ್ವೆ - ಬಡ ಭಕ್ತೆ. ಬೇರೆಯವರ ಮನೆಗೆ ನೀರು ಹೊರುವ ಕೂಲಿ ಕಾಯಕ ಮಾಡುತ್ತಲೇ ಭಕ್ತಿಯನ್ನು ಮೆರೆದಳು.

4. ಮಾದಾರ ಚನ್ನಯ್ಯ ರಾಜನ ಕುದುರೆ ಲಾಯಕ್ಕೆ ಹುಲ್ಲು ತಂದು ಹಾಕುವವ. ಜಾತಿಯಿಂದ ಮಾದಾರ, ವೃತ್ತಿಯಿಂದ (ಸಂಪ್ರದಾಯ ದೃಷ್ಟಿಯಲ್ಲಿ) ಕೀಳು ಕಾಯಕದವನು. ಆದರೇನಂತೆ ತನ್ನ ಭಕ್ತಿಯಿಂದ ಚೋಳರಾಜನನ್ನೇ ಚೆರಗಾಗಿಸಿದ. ಆ ರಾಜ ಎಂಥಾ ಸಹೃದಯಿ ! ತನ್ನ ಅರಮನೆಯ ಕುದುರೆ ಲಾಯಕ್ಕೆ ಹುಲ್ಲು ಹಾಕುವ ಚೆನ್ನಯ್ಯ ಭಕ್ತ ಶ್ರೇಷ್ಠನೆಂದರಿತು ಅವನ ಮನೆ ಬಾಗಿಲಿಗೆ ಬಂದು ಗೌರವಿಸಿದ. ಹೀಗೆ ಶಿವಭಕ್ತಿ ಪರಂಪರೆಯು ಉದಾತ್ತ ಮೌಲ್ಯಗಳನ್ನು ಎತ್ತಿ ಹಿಡಿಯಿತು. ಕರ್ಮಠ ಸಂಪ್ರದಾಯಗಳನ್ನು ಕಿತ್ತೆಸೆಯಿತು. ಅದನ್ನು ಎಷ್ಟು ಚೆನ್ನಾಗಿ ಧರ್ಮಪಿತರು ಹೇಳುತ್ತಾರೆ ನೋಡಿರಿ.

ಪಂಚಬ್ರಹ್ಮವ ಕೆಡಿಸಿತ್ತು : ಪ್ರಣವ ಮಂತ್ರವನೀಡಾಡಿತ್ತಲ್ಲಾ :
ಕರ್ಮಂಗಳನೆ ಕಳೆಯಿತ್ತು ; ಕ್ರೀಗಳನೆ ಮೀರಿತ್ತಲ್ಲಾ :
ಆಗಮದ ಹಲ್ಲ ಕಳೆಯಿತ್ತು
ಲಿಂಗದೇವಯ್ಯನ ಭಕ್ತಿಗಜ, ಹೊ !

ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ !
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ !
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ,
ನಮ್ಮ ಕೂಡಲಸಂಗಯ್ಯನು ಚನ್ನಯ್ಯನ ಮನೆಯಲುಂಡ ಕಾರಣ !

ವೈದಿಕ ಧರ್ಮದ ಪಂಚಾಂಗಗಳನ್ನೇ ಬ್ರಹ್ಮವೆಂದು ಜನರು ತಿಳಿದಿದ್ದರು. ಕರ್ಮಾಚರಣೆಗಳಲ್ಲೇ ಕಾಲಕಳೆಯುತ್ತಿದ್ದರು. ಮಡಿ - ಹುಡಿ ಎಂಬ ಕ್ರಿಯೆಗಳ ಜಾಲದಲ್ಲಿ ಜನರು ಸಿಕ್ಕಿಬಿದ್ದಿದ್ದರು. ಆಗಮಗಳು ತಮ್ಮ ಮೂಲ ಶುಚಿತ್ವವನ್ನು ಕಳೆದುಕೊಂಡು ವೈದಿಕ ಧರ್ಮದ ಅನುಕರಣೆ ಮಾಡುತ್ತಿದ್ದವು. ಭಕ್ತಿ (ಪರಂಪರೆ) ಎಂಬ ಗಜವು ಇವೆಲ್ಲದರ ಮೇಲೆ ದಾಳಿ ಮಾಡಿ ಅವುಗಳನ್ನು ದುರ್ಬಲಗೊಳಿಸಿತು.

ವೇದ, ಶಾಸ್ತ್ರ, ತರ್ಕಗಳ ಬಾಲ ಹಿಡಿಯುತ್ತ ಆಗಮಗಳು ಸಹಿತ ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯನ್ನು ಪೋಷಿಸುತ್ತಿದ್ದವು. ಮಾದರ ಚೆನ್ನಯ್ಯನ ಮನೆಯಲ್ಲಿ ಶಿವನು ಉಂಡುದರಿಂದ

Digitalised by e Sahithya Documentataion Forum
Sponsored by Sarayu Foundation Trust

ವೇದ, ಶಾಸ್ತ್ರ, ಪುರಾಣ, ಆಗಮಗಳು ಬೆಚ್ಚಿ ಬೆಪ್ಪಾಗಿ, ತಲೆ ತಗ್ಗಿಸಿ ನಿಂತುವಂತೆ. ಭಕ್ತಿಯ ಮಹಿಮೆ ಅಂತಹುದು ಎಂದು ಧರ್ಮಪಿತ ಬಸವಣ್ಣನವರು ಶ್ಲಾಘಿಸುತ್ತಾರೆ. ಬಸವಣ್ಣನವರಿಗಿಂತಲೂ ನಾವು ಹೆಚ್ಚು ಪುಣ್ಯಶಾಲಿಗಳು! ಏಕೆಂದರೆ ಅವರಿಗೆ ಇದ್ದುದು ಭಕ್ತಿ ಪರಂಪರೆಯಾದರೂ ಅದು ಅವೈಜ್ಞಾನಿಕ, ಅತಾರ್ಕಿಕ, ಭಾವಾತಿರೇಕದ ಭಕ್ತಿ ಪರಂಪರೆ. ನಮಗೆ ಇರುವುದು ಬಸವರೇ ಆದಿ ಪ್ರಮಥರಾಗಿ ಕೊಟ್ಟ ವೈಜ್ಞಾನಿಕ, ಪ್ರಗತಿಪರ ಚಿಂತನೆಯ, ಸಾಮಾಜಿಕ ಸಮಾನತೆ ಎತ್ತಿ ಹಿಡಿಯುವ ಶರಣ ಪರಂಪರೆ.

"ಎಮ್ಮಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ" ಎಂಬ ಮಾತು ಅತ್ಯಂತ ಅರ್ಥಗರ್ಭಿತ. ಇಷ್ಟಲಿಂಗ ಧಾರಣೆಯೇ ಮುಖ್ಯವಾಗಿ ಭಕ್ತಿಯೇ ಪ್ರಧಾನವಾಗಿ ಒಂದು ಆಂದೋಲನ ಪ್ರಾರಂಭವಾದಾಗ ಬಸವಣ್ಣನವರ ಸುತ್ತ ಕೇಂದ್ರೀಕೃತವಾದುದು ಶಿವಭಕ್ತರ ಸಮೂಹ. ಬಸವಣ್ಣನವರ ಕ್ರಾಂತಿಕಾರಿ ಮಾರ್ಗಕ್ಕೆ ಬೆಂಬಲ ದೊರೆತುದು ಶಿವಭಕ್ತರಿಂದಲೇ. ಈ ಬೆಂಬಲ ದೊರೆತಾಗ ಹರುಷಿತರಾಗಿ ಬಸವಣ್ಣನವರು ಹೇಳುತ್ತಾರೆ "ಹರನು ಮೂಲಿಗನಾಗಿ ಬಂದ ಭಕ್ತಿ ಪರಂಪರೆಯ ಬೆಂಬಲ ನನಗಿದೆ. ನಿಮ್ಮ ಕರ್ಮಠ ಮಾರ್ಗಿಗಳ ಬೆಂಬಲ ಇಲ್ಲದಿದ್ದರೇನಂತೆ ?" ಎಂದು

ಈ ವಾಕ್ಯ ನನಗೆ ತಟ್ಟನೆ ನೆನಪಾದುದು ಜ್ಯೋತಿ ಯಾತ್ರೆ ಆರಂಭವಾದಾಗ. ಶರಣ ಭೂಮಿ ಬಸವ ಕಲ್ಯಾಣದಲ್ಲಿ 2002 ರ ಮೇ 1,2 ಮತ್ತು 3 ರಂದು ಇದಕ್ಕೆ ಪೂರ್ವಭಾವಿಯಾಗಿ ಆರು ಜ್ಯೋತಿಗಳನ್ನು ಚನ್ನಬಸವ ಜ್ಯೋತಿ, ಅಲ್ಲಮಪ್ರಭು ಜ್ಯೋತಿ, ಬಸವ ಜ್ಯೋತಿ, ಅಕ್ಕಮಹಾದೇವಿ ಜ್ಯೋತಿ, ಸಿದ್ಧರಾಮೇಶ್ವರ ಜ್ಯೋತಿ, ಹರಳಯ್ಯ ಜ್ಯೋತಿ ಹೊರಡಿಸುವ ಸಂಕಲ್ಪ ತಳೆದಾಗ ಹೇಗೋ ಏನೋ ಎಂಬ ಆತಂಕಕಾಡುತ್ತಿತ್ತು. ಆದರೆ ಜ್ಯೋತಿ ಯಾತ್ರೆ ಆರಂಭವಾದ ಮೇಲೆ ಸಿಕ್ಕಿರುವ ಪ್ರೋತ್ಸಾಹ ನೋಡಿದರೆ ಹೃದಯ ತುಂಬಿ ಬರುತ್ತಿದೆ. ಶರಣರನ್ನು ಕುರಿತು ಎಂತಹ ಭಕ್ತಿ ಅಭಿಮಾನ! ದಾರಿಯಲ್ಲಿ ಪಾದಯಾತ್ರೆಯಲ್ಲಿ ಸಾಗಿ ಬರುವ ಜ್ಯೋತಿಗಳನ್ನು, ಅವನ್ನು ತರುವ ಪೂಜ್ಯ ಸ್ವಾಮಿಗಳನ್ನು ಎಂತೆಂಥವರೂ ಸ್ವಾಗತಿಸಿ, ಗೌರವಿಸುವ ಬಗೆ ನೋಡಿದರೆ ಆಶ್ಚರ್ಯವೆನಿಸುತ್ತದೆ. ಜ್ಯೋತಿ ಯಾತ್ರೆಯ ಪ್ರೇರಣೆ ನೀಡಿದ ಧರ್ಮಪಿತರ ಯೋಜನೆಯ ಬಗ್ಗೆ ಆಶ್ಚರ್ಯ ಅಭಿಮಾನ ಉಂಟಾಗುತ್ತಿದೆ. ಜ್ಯೋತಿ ಯಾತ್ರೆಯಲ್ಲಿ ಭಾಗವಹಿಸುತ್ತಿರುವ ಪೂಜ್ಯರು ಮತ್ತು ಸಂಗಡ ಹೊರಟಿರುವ ಶರಣ-ಶರಣೆಯರು, ಸ್ವಾಗತಿಸುವ ಜನರು ಎಂಥಾ ಧನ್ಯಾತ್ಮರು! ಬಿಸಿಲಿನ ಬೇಗೆಯ ಈ ದಿನದಲ್ಲಿ ಅವರು ಇಡುವ ಒಂದೊಂದು ಹೆಜ್ಜೆಯೂ ಬಸವಾದಿ ಪ್ರಮಥರಿಗೆ ಸಲ್ಲಿಸುವ ಕೃತಜ್ಞತೆಯ ಸಂಕೇತ.

ಒಂದೆರಡು ಊರುಗಳವರು (ಒಂದು ಊರಿನಲ್ಲಿ ವೀರಶೈವ ಮಹಾಸಭೆಯ ಸ್ಥಳೀಯ ಘಟಕ ಇನ್ನೊಂದು ಊರಿನಲ್ಲಿ ಬಸವ ಕೇಂದ್ರದ ಪ್ರಭೃತಿ) "ನಮ್ಮೂರಿಗೆ ಜ್ಯೋತಿ ಬರಬಾರದು, ಬಂದರೆ ಕಲ್ಲಿನ ಏಟು ತಿನ್ನ ಬೇಕಾಗುತ್ತದೆ, ಜೀವಂತ ಹೋಗಲು ಸಾಧ್ಯವಿಲ್ಲ" ಎಂದು ನಮ್ಮ ಕಾರ್ಯಕರ್ತರನ್ನು ಭಯ ಪಡಿಸಿದರು. ಅವರ ಬಾಯಿಯಲ್ಲಿ ಹೊಡಿ, ಬಡಿ, ರಕ್ತಪಾತ ಮುಂತಾದ ಶಬ್ದಗಳ ಹುಳುಗಳೇ ಉದುರುವುದು. ನಾನು ಫೋನಲ್ಲಿ ಹೇಳಿದೆ, "ಸ್ಥಳೀಯವಾಗಿ ಕೆಲಸ ಮಾಡುವ ನಮ್ಮ ಕಾರ್ಯಕರ್ತರು ಪುಕ್ಕಲು ಆಸಾಮಿಗಳಿದ್ದರೆ (ನಮಗೆ

28ನೇ ಪುಟಕ್ಕೆ ಮುಂದುವರೆದಿದೆ....

ಸಮಸ್ಯೆ ?- ಸಮಾಧಾನ !

ವೀರಣ್ಣ ಗೌಡಗಾಂವ, ಬಸವ ಕಲ್ಯಾಣ.- ಬೀದರಿನ ಶಿವಯೋಗಾಶ್ರಮದ ಸ್ವಾಮಿಗಳು ವಚನ ಸಾಹಿತ್ಯ ಸಂರಕ್ಷಣಾ ಸಮಿತಿ ಎಂಬ ಒಂದು (ಖೋಟಾ) ಸಂಸ್ಥೆ ಕುರಿತು ಸುತ್ತೋಲೆ ಹೊರಡಿಸಿದ್ದಾರೆ. ಅದರ ಪ್ರತಿಗಳನ್ನು ಅನೇಕರಿಗೆ ಕಳಿಸಿದ್ದಾರೆ. ಮೊದಲನೆಯ ಹೆಸರು ಶ್ರೀ ಮೃಗರಾಜೇಂದ್ರ ಮಠ, ಚಿತ್ರದುರ್ಗ ಎಂದಿದೆ. ಅದು ಮುರುಘರಾಜೇಂದ್ರ ಇರಬೇಕಲ್ಲವೆ ?

★ ಬೀದರ್ ಜಿಲ್ಲೆಯ ಕನ್ನಡ ಬಹಳ ವಿಶೇಷ. ಕನ್ನಡದಲ್ಲಿ ಇಲ್ಲದೆ ಇರುವ ವಿಶೇಷ ಪದಗಳು ಬೀದರ್ ಜಿಲ್ಲೆಯ ಬಹುಪಾಲು ಜನರ ಕನ್ನಡದಲ್ಲಿರುತ್ತವೆ. ಅದಕ್ಕೆ ಪೂಜ್ಯ ಶ್ರೀ ಶಿವಯೋಗಿ ಸ್ವಾಮಿಗಳು ಹೇಗೆ ಹೊರತಾಗುತ್ತಾರೆ ?

ಮೃಗರಾಜ ಎಂದರೆ ಸಿಂಹ. ಅದು ಇನ್ನಿತರ ಪ್ರಾಣಿಗಳನ್ನೆಲ್ಲ ತನ್ನ ಅಡಿಯಾಳಾಗಿ ಮಾಡಿಕೊಂಡು ವನ ರಾಜನಾಗಬೇಕು ಎಂಬ ಹವ್ಯಾಸ ಉಳ್ಳುದು. ವಿರಕ್ತ ಮಠದ ಸ್ವಾಮಿಗಳಾದ ಶ್ರೀ ಶಿವಯೋಗಿ ಸ್ವಾಮಿಗಳು ಬಹಳ ನಿಕಟವಾದ ಒಡನಾಟವನ್ನು ಮುರುಘರಾಜೇಂದ್ರ ಮಠದವರೊಡನೆ ಹೊಂದಿದ್ದಾರೆ. ಬಹುಶಃ ಮೃಗರಾಜನ ಹವ್ಯಾಸವನ್ನು ಅವರು ಗ್ರಹಿಸಿರಬಹುದು. ಅದಕ್ಕೆ ಮೃಗರಾಜೇಂದ್ರಮಠ ಎಂಬ ಅರ್ಥಬರುವ ಪದ ಬಳಕೆ ಮಾಡಿರಬಹುದು. ಅವರನ್ನೇ ಕೇಳಿ ನೋಡಿರಿ.

ನಾಗಶೆಟ್ಟಿ ಶೆಟಕಾರ, ಬೀದರ್.- ಕೆಲವರು ಒಂದೂ ವಿಧಾಯಕ ಕೆಲಸ ಮಾಡರು. ಇನ್ನೊಬ್ಬರು ಉತ್ತಮ ಕೆಲಸ ಮಾಡುವಾಗ ಅದನ್ನು ವಿರೋಧಿಸುವುದಷ್ಟನ್ನೇ ಮಾಡುವರು. ಇಂಥವರಿಗೆ ಏನೆಂದು ಕರೆಯಬೇಕು ?

★ ಜೇನು ಹುಳ ಗೂಡುಕಟ್ಟಿ, ಹೂವಿನಿಂದ ಹೂವಿಗೆ ಹಾರಾಡಿ ಮಕರಂದ ಸಂಗ್ರಹಿಸುವುದು. ಅದನ್ನು ಜೇನುತುಪ್ಪವಾಗಿ ಪರಿವರ್ತಿಸಿ ಜಗತ್ತಿಗೆ ನೀಡುವುದು. ಇದೇ ಜಾತಿಯ ಇನ್ನೊಂದು ಕೀಟ ಇರುವುದು ಅದಕ್ಕೆ ಕಣಜ (ಕಡುಜೀರಿಗೆ) ಎಂದು ಕರೆಯುತ್ತಾರೆ. ಅದರ ಗೂಡು ಒಣದಾಗಿಯೇ ಇರುತ್ತದೆ. ಅದು ಮಂದಿಯನ್ನು ಕಡಿಯುತ್ತ ಹಾರಾಡುತ್ತದೆ. ಕಡಿದಾಗ ಬಾವು, ನೋವು, ಬಾಧೆ ಉಂಟಾಗುತ್ತದೆ. ಹಾಗೆಯೇ ಕೆಲವರು ಸದಾ ವಿಧಾಯಕ ಚಟುವಟಿಕೆಗಳಲ್ಲಿ, ಧರ್ಮಜಾಗೃತಿಯಲ್ಲಿ ತತ್ತ್ವ ಪ್ರಚಾರದಲ್ಲಿ ಜೇನುಹುಳದಂತೆ ತೊಡಗಿರುತ್ತಾರೆ. ಮತ್ತೆ ಕೆಲವರು ಕಡುಜೀರಿಗೆ (ಕಣಜ)ಗಳಂತೆ ಬರೀ ಕಡಿಯುವ ಕೆಲಸ ಮಾಡುತ್ತಾರೆ. ಕಣಜದಿಂದ ಜೇನು ತುಪ್ಪವನ್ನು ನಿರೀಕ್ಷಿಸಲೇಬಾರದಲ್ಲವೆ ?

ಕಲ್ಮೇಶ್, ಸಂಗಮ, ಸಂಚಾರಿ.- ಜ್ಯೋತಿಯನ್ನು ತೆಗೆದುಕೊಂಡು ತಿಪಟೂರಿನ ಬೀದಿಯಲ್ಲಿ ಪಾದಯಾತ್ರೆ ಮಾಡುತ್ತ ಸಾಗಿದ್ದೆವು. ಅಲ್ಲಿಯ ಗಣ್ಯರೋರ್ವರು ಬಂದು ಇಲ್ಲಿ ಬಸವೇಶ್ವರ ದೇವಸ್ಥಾನವಿದೆ, ಹೋಗೋಣ ಬನ್ನಿ ಎಂದರು. ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳು, ನಾವು ಎಲ್ಲ ಹೋದೆವು. ಅಲ್ಲಿ ಒಂದು ಕಾರ್ಯಕ್ರಮ ನಡೆಯುತ್ತಿತ್ತು. ಪಂಚಾಚಾರ್ಯ ಸ್ವಾಮಿಗಳು ಮತ್ತು (ಹೊರಗೆ) ವಿರಕ್ತರು (ಒಳಗೆ ಪಂಚಾಚಾರ್ಯರು) ಆದ

Digitalised by e Sahithya Documentataion Forum
Sponsored by Sarayu Foundation Trust

ಮತ್ತೊಬ್ಬರು ವೇದಿಕೆಯ ಮೇಲಿದ್ದರು. ಜನರ ಒತ್ತಾಯದಂತೆ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳು ಮಾತನಾಡಿದರು. ಲಿಂಗಾಯತವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ ಬಸವಣ್ಣನವರೇ ಇದರ ಸ್ಥಾಪಕರು, ವಚನ ವಾಙ್ಮಯವೇ ಇದರ ಧರ್ಮ ಸಂಹಿತೆ ಎಂದು ಹೇಳಿದರು. ಜನರು ಸಂತೋಷ ಪಟ್ಟರಾದರೂ ಸ್ವಾಮಿಗಳು ಕಸಿವಿಸಿ ಪಡಲು ತೊಡಗಿದರು. ಅದು ಬಸವೇಶ್ವರ ದೇವಸ್ಥಾನ, ಏಕೆ ಕಸಿವಿಸಿ ಪಡುತ್ತಿದ್ದಾರೆಂಬುದು ಮೊದಲು ನಮಗೆ ತಿಳಿಯಲಿಲ್ಲ. ಜ್ಯೋತಿಯಾತ್ರೆ ಮುಂದುವರಿಸಬೇಕಿತ್ತು. ನಾವು ಹೊರಟೆವು ನಂತರ ಮಾತಾಡಿದ ಓರ್ವ ಸ್ವಾಮಿಗಳು ಟೀಕಿಸಿ ಹೇಳಿದರಂತೆ ವಚನಗಳನ್ನು ಬರೆದ ಮಾತ್ರಕ್ಕೆ ಬಸವಣ್ಣನವರು ಧರ್ಮ ಸ್ಥಾಪಕರು ಹೇಗಾಗುವರು ? ಅಂಬಿಗರ ಚೌಡಯ್ಯ ವಚನ ಬರೆದಿದ್ದಾನೆ. ಮಡಿವಾಳ ಮಾಚಯ್ಯನೂ ಬರೆದಿದ್ದಾನೆ ಎಂದು.

★ ವಿಶ್ವಗುರು ಬಸವಣ್ಣನವರು ಕೇವಲ ವಚನಗಳನ್ನು ಮಾತ್ರ ಬರೆಯಲಿಲ್ಲ. ಲಿಂಗಾಯತ ಧರ್ಮದ ಕೇಂದ್ರವಾದ ಇಷ್ಟಲಿಂಗವನ್ನು ಕೊಟ್ಟುದಲ್ಲದೆ ಮಂತ್ರಪುರುಷರೇ ಆದರು. ಅದಿರಲಿ ಸ್ವಾಮಿಗಳ ಮಾತುಗಳಿಗೆ ನೀವೇಕೆ ತಲೆ ಕೆಡಿಸಿಕೊಳ್ಳುವಿರಿ ? ಏನೊಂದು ಸಾಹಿತ್ಯ ಬರೆಯದ, ಸಂದೇಶ ನೀಡದ ಅಸ್ತಿತ್ವದಲ್ಲೇ ಇರದಿದ್ದ ರೇಣುಕಾಚಾರ್ಯರನ್ನು ಧರ್ಮ ಸ್ಥಾಪಕರೆನ್ನುವ ಬುದ್ಧಿವಂತರ ಆಲಾಪಕ್ಕೆ ನೀವೇಕೆ ಗಮನಕೊಡುವಿರಿ ? ಈಗ ನಾವು ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುವುದು ಉಸುಕನ್ನು ಹಿಂಡಿ ಎಣ್ಣೆ ತೆಗೆಯುವ ವ್ಯರ್ಥ ಪ್ರಯತ್ನ ಮಾಡಿದಂತೆ. ಜನರಿಗೆ ಸತ್ಯವನ್ನು ಮನವರಿಕೆ ಮಾಡಿಕೊಟ್ಟರೆ ಸಾಕು.

ವಿವೇಕಾನಂದ್, ಬೀದರ್.- ಅನುಭವ ಮಂಟಪ ಟ್ರಸ್ಟ್‌ನವರು ಏಪ್ರಿಲ್ 1 ರಿಂದ 20 ರ ವರೆಗೆ ಜಿಲ್ಲೆಯಾದ್ಯಂತ (ಬಸವ ತತ್ತ್ವ) ಪ್ರಚಾರ ಕಾರ್ಯಕ್ರಮವನ್ನು ಹಾಕಿಕೊಳ್ಳುವರಂತೆ. ನಮ್ಮ ಕೆಲವರಿಗೆ ಅನುಮಾನ ಅವರು ತತ್ತ್ವ ಪ್ರಚಾರ ಮಾಡುವುದಿಲ್ಲ ಕಲ್ಯಾಣ ಪರ್ವದ ಬಗ್ಗೆ ಅಪ ಪ್ರಚಾರ ಮಾಡುವರು ಎಂದು. ಈ ಬಗ್ಗೆ ನಾವು ವಹಿಸಬೇಕಾದ ಮುನ್ನೆಚ್ಚರಿಕೆ ಏನು ?

★ ನೀವು ಶಾಂತವಾಗಿ, ವಿಧಾಯಕವಾಗಿ ಕೆಲಸ ಮಾಡಿರಿ, ಪ್ರಚಾರ ಮಾಡಿರಿ ಅವರ ಬಗ್ಗೆ ಏನೂ ಟೀಕಿಸಬೇಡಿರಿ. ನಮ್ಮ ಪ್ರಚಾರ ಕಾರ್ಯದ ಹೊರೆಯನ್ನು ಅವರು ಬಹಳಷ್ಟು ಕಡಿಮೆ ಮಾಡುವರು. ಕಲ್ಯಾಣ ಪರ್ವಕ್ಕೆ ಹೋಗಬೇಡಿ ಎಂದು ಅವರು ಪ್ರಚಾರ ಮಾಡಿದರೆ ಜನರಿಗೆ ಕಲ್ಯಾಣ ಪರ್ವ ನಡೆಯುವ ವಿಚಾರ ಗೊತ್ತಾಗುವುದು. ಮಾತಾಜಿಯವರಿಗೆ ಸಹಕರಿಸಬೇಡಿರಿ ಎಂದು ಪ್ರಚಾರ ಮಾಡಿದರೆ, "ಇಷ್ಟೊಂದು ಕೆಟ್ಟವರಾದ ಮಾತಾಜಿ ಹೇಗಿರಬಹುದು ಪಾರ್ವತಿಯೋ (ಸ್ವಾತ್ವಿಕ), ದುರ್ಗಿಯೋ (ರಾಜಸ), ಕಾಳಿಯೋ (ತಾಮಸ) ಎಂಬ ಕುತೂಹಲದಿಂದ ಜನರು ಬರುವರು ಪುಕ್ಕಟೆಯಾಗಿ ಕಾರ್ಯಕ್ರಮದ ಪ್ರಚಾರವಾಗುವುದು. ಖರ್ಚಿನ ಜವಾಬ್ದಾರಿ ಅವರು ಹೊರವರು. ಎಷ್ಟು ಒಳ್ಳೆಯ ಜನರಲ್ಲವೆ?

ಪ್ರಭುಲಿಂಗ ಪಾಟೀಲ್, ಬೀದರ್.- ನೀವು ಜ್ಯೋತಿ ಸಂಚಾರದ ಮೂಲಕ ತತ್ತ್ವ ಪ್ರಚಾರದ ವ್ಯವಸ್ಥೆ ಮಾಡಿದ್ದೀರಿ ಎಂದು ಅನುಭವ ಮಂಟಪದವರು ಸಹ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಇದು ಕೇವಲ ಕಾಪಿ ಮಾಡಿದಂತಲ್ಲವೆ ? ಹೊಟ್ಟೆ ಕಿಚ್ಚಿನ ಪ್ರತಿಫಲವಲ್ಲವೆ?

★ ನೀವು ಕೆಟ್ಟುದರಲ್ಲೂ ಒಳಿತನ್ನು ಕಾಣುವ ದೃಷ್ಟಿ ಬೆಳಸಿಕೊಳ್ಳಿರಿ. ಅನುಕರಣೆಗಾಗಿಯೇ ಮಾಡಲಿ, ಹೊಟ್ಟೆಯ ಕಿಚ್ಚಿನಿಂದಲೇ ಮಾಡಲಿ ತತ್ತ್ವಪ್ರಚಾರ ಒಳ್ಳೆಯದಲ್ಲವೆ ? ಆರೋಗ್ಯಕರ ಸ್ಪರ್ಧೆಯನ್ನು ಎಷ್ಟು ಜನ ಮಾಡಿದರೂ ಒಳ್ಳೆಯದು. ಆದ್ದರಿಂದ ಅವರನ್ನು ಅಭಿನಂದಿಸಿರಿ.

ಸುನಂದಾ ಬಸವರಾಜ ಕೊಪ್ಪದ, ಧಾರವಾಡ.- ಬಂಧು, ಮಿತ್ರ, ಗುರು ಮೂವರಲ್ಲಿ ಯಾರು ನಿಜವಾದ ಹಿತೈಷಿಗಳು ?

★ ಬಂಧುವಿಗಿಂತ ನಿಜವಾದ ಮಿತ್ರ ಪ್ರಾಮಾಣಿಕ ಹಿತೈಷಿ; ಪ್ರಾಮಾಣಿಕ, ನಿರ್ವಂಚಕ ಗುರು ಬಂಧು ಮತ್ತು ಮಿತ್ರರಿಗಿಂತಲೂ ಹಿತೈಷಿ ; ಏಕೆಂದರೆ ಯಾವುದೇ ಸ್ವಾರ್ಥದ ಸೋಂಕಿಲ್ಲದೆ ಎಲ್ಲರ ಹಿತವನ್ನು ಬಯಸುತ್ತಾನೆ.

ಶಾರದಾ. ಎಂ. ಆಚಾರ್ಯ, ಬಲೂಟಿ, ಬಸವನ ಬಾಗೇವಾಡಿ.- ಬಸವಣ್ಣನವರು ಒಂದು ಕುಲೀನ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಆದರ ಧಾರ್ಮಿಕ ಸಂಸ್ಕಾರವಾದ ಜನಿವಾರ ಧಾರಣೆಯನ್ನು ತ್ಯಜಿಸಿದರು. ಇದೊಂದು ಸಮಾಜದ ಕಟ್ಟುಪಾಡು, ಮೂಢ ನಂಬಿಕೆ ನನಗೆ ಬೇಕಾಗಿಲ್ಲ ಎಂದರು. ಆದರೆ ಶಿವದಾರ ಬೇಕಾಗಿತ್ತೆ ? ಇದೂ ಒಂದು ಮೂಢ ಭಾವನೆಯಲ್ಲವೆ ? "ಕಾಯಕವೇ ಕೈಲಾಸ" ಎಂದ ಅವರಿಗೆ ಶಿವದಾರದ ಅಗತ್ಯವಿತ್ತೆ ?

★ ಜನಿವಾರ, ಶಿವದಾರ ಎರಡೂ ದಾರಗಳೇ ಆದರೂ ಎರಡರಲ್ಲಿ ಬಹಳ ವ್ಯತ್ಯಾಸವಿದೆ. ಜನಿವಾರ ಭೇದವನ್ನು ಸೂಚಿಸುವ, ಗಟ್ಟಿಗೊಳಿಸುವ ಕುರುಹಾದರೆ ಶಿವದಾರ ಭೇದ ನಿವಾರಿಸುವ ಕುರುಹು. ಹೇಗೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಜನಿವಾರ ಉಂಟು. ಅದರಲ್ಲೂ ವರ್ಣ ವ್ಯವಸ್ಥೆಗೆ ತಕ್ಕಂತೆ ಎಳೆಗಳನ್ನು ನಿರ್ಧರಿಸಲಾಗಿದೆ. ಶೂದ್ರ, ಅಸ್ಪೃಶ್ಯ ಮತ್ತು ಸ್ತ್ರೀಯರಿಗೆ ಜನಿವಾರ ಧಾರಣೆ ಇಲ್ಲ. ಶಿವದಾರದ ಧಾರಣೆ ಯಾವುದೇ ಭೇದವಿಲ್ಲದೆ ಮಾನವರೆಲ್ಲರಿಗೂ ಲಭ್ಯ. ಜನಿವಾರ ಸಾಧನೆ - ಸಿದ್ಧಿ ಎರಡೂ ಅಹುದು. ಶಿವದಾರ ಕೇವಲ ಸಾಧನ, ಇಷ್ಟಲಿಂಗ ಅದರ ಗುರಿ. ಇಷ್ಟಲಿಂಗವನ್ನು ಕರಡಿಗೆಯಲ್ಲಿಟ್ಟು ಕಟ್ಟದೆ ಬಟ್ಟೆಯಲ್ಲಿ ಕಟ್ಟಿಕೊಳ್ಳಲು ಬಹುದು. ಜನಿವಾರ ಹುಟ್ಟುಹಾಕಿದ್ದ ಭೇದ ನಿವಾರಿಸಲು ಹುಟ್ಟಿದ್ದು ಇಷ್ಟಲಿಂಗ (ವನ್ನು ಧರಿಸುವ ಶಿವದಾರ) ಹೀಗೆ ಜನಿವಾರ - ಶಿವದಾರಕ್ಕೆ ಅಜಗಜಾಂತರ ವ್ಯತ್ಯಾಸ. ಮೊದಲಿನದು ಜಾತೀಯತೆಯ ರೋಗಕಾರಕವಾದರೆ ಎರಡನೆಯದು ರೋಗ ನಿವಾರಕ. ವ್ಯಕ್ತಿಯು ತನು-ಮನ-ಆತ್ಮ ಎಂಬ ಮೂರು ಘಟಕಗಳಿಂದ ಆಗಿದ್ದಾನೆ. ಈ ಮೂರು ಘಟಕಗಳಿಗೆ ಆಹಾರ ಬೇಕು. ತನುವಿಗೆ ಅನ್ನದಿಂದ, ಮನಕ್ಕೆ ಜ್ಞಾನದಿಂದ, ಆತ್ಮನಿಗೆ ಪಾರಮಾರ್ಥ ಸಾಧನೆಯಿಂದ ತೃಪ್ತಿ ಲಭ್ಯವಾಗುವುದು. ಕೇವಲ ದುಡಿತದಿಂದಲೇ ಸಂಪೂರ್ಣತೆ ಪ್ರಾಪ್ತಿಯಾಗದು. "ಕಾಯಕವೇ ಕೈಲಾಸ" ಎಂಬ ಸೂತ್ರದಲ್ಲಿ ಅಡಗಿರುವ ಸತ್ವವೇನೆಂದರೆ ದೇವನಿಗೆ ಶರಣಾಗಿ (spiritual value), ಸತ್ಯ ಶುದ್ಧ ಪ್ರಾಮಾಣಿಕತೆ (moral value) ಯಿಂದ ದುಡಿಮೆ ಮಾಡಿದಾಗ ಮಾತ್ರ ಅದು ಕಾಯಕ ಇಲ್ಲವಾದರೆ ಅದು ಕತ್ತೆಯ ದುಡಿತ. ಕಾಯಕದಿಂದ ಗಳಿಸಿದ್ದು ಮಾತ್ರ ಪ್ರಸಾದ, ಇಲ್ಲವಾದರೆ ಅದು ಕೂಳು. ಕಾಯಕದಿಂದ ಗಳಿಸಿ,

Digitalised by e Sahithya Documentataion Forum
Sponsored by Sarayu Foundation Trust

ದಾಸೋಹದ ಮೂಲಕ ವಿನಿಯೋಗಿಸಿ ಸ್ವೀಕರಿಸುವುದು ಮಾತ್ರ ಪ್ರಸಾದ.

ರತ್ನಮ್ಮ ಚೆಲುಮಪ್ಪ, ಚಳ್ಳಕೆರೆ.- ಓಂ ನಮಃ ಶಿವಾಯ, ಓಂ ಲಿಂಗಾಯ ನಮಃ ಎರಡರಲ್ಲಿ ಲಿಂಗಪೂಜೆಗೆ ಯಾವುದು ಸೂಕ್ತ ?

★ ಒಂದು ದಿನ ಅನ್ಯಮನಸ್ಕಳಾಗಿ ಒಬ್ಬರಿಗೆ ಫೋನ್ ಮಾಡುತ್ತಿದ್ದೆ. ಆಗ ಕಡೆಯ ನಂಬರ್ 54 ಬದಲು 34 ಒತ್ತಿದೆ. ಅದು ಬೇರೆ ಕಡೆ ಹೋಯಿತು. ನಾನು ನಿರೀಕ್ಷಿಸಿದ ಧ್ವನಿ ಬರದಾಗ ಆಶ್ಚರ್ಯವಾಯಿತು. ನೋಡಿದರೆ ನಂಬರ್ ಒತ್ತುವುದರಲ್ಲಿ ತಪ್ಪಾಗಿತ್ತು. ನನ್ನ ಉದ್ದೇಶ ಸರಿ ಇದ್ದರೂ ನಂಬರ್ ತಪ್ಪು ಒತ್ತಿದ್ದರಿಂದ ಬೇರೆ ಕಡೆ ಹೋಯಿತು. ಹಾಗೆಯೇ ನಿರಾಕಾರ ನಿರ್ಗುಣನಾದ ಲಿಂಗದೇವ ಸೃಷ್ಟಿಕರ್ತನ ಅನುಸಂಧಾನ ಮಾಡಿ ಅನುಗ್ರಹ ಪಡೆದುಕೊಳ್ಳುವ ಹಂಬಲ, ಉದ್ದೇಶವಿದ್ದರೂ 'ಓಂ ಲಿಂಗಾಯ ನಮಃ' ಎಂಬ ನಿರ್ಗುಣ ದೇವ ಸೂಚಕ ಮಂತ್ರ ಬಿಟ್ಟು, 'ಓಂ ನಮಃ ಶಿವಾಯ' ಎಂಬ ಸಗುಣ ಗುರೂಪಾಸಕ ಮಂತ್ರವನ್ನು ಪಠಿಸಿದರೆ ಆಗುವುದು ಸಗುಣ ರೂಪಿ ಗುರು ಶಿವನ ಸಾಕ್ಷಾತ್ಕಾರ ಬೇಕಾದರೆ 'ಓಂ ನಮಃ ಶಿವಾಯ' ಪಠಿಸಿರಿ, ನಿರಾಕಾರ ದೇವನ ಸಾಕ್ಷಾತ್ಕಾರ ಬೇಕಾದರೆ 'ಓಂ ಲಿಂಗಾಯ ನಮಃ' ಪಠಿಸಿರಿ. ಗುರಿಯನ್ನು ಮೊದಲು ನಿರ್ಧರಿಸಿಕೊಳ್ಳಬೇಕು.

ಅಧ್ಯಕ್ಷರು ಮತ್ತು ಸದಸ್ಯರು, ರಾ.ಬ.ದಳ, ಹುಡಗಿ.- ಬಸವ ಧರ್ಮ ಪೀಠದಲ್ಲುಳಿದು, ಲಿಂಗೈಕ್ಯ ಅಪ್ಪಾಜಿಯವರ ಹಾಗೂ ನಿಮ್ಮ ಒಡನಾಡಿಗಳಾಗಿ ಸೇವೆ ಸಲ್ಲಿಸಿ, ''ಲಿಂಗದೇವ'' ಬಗ್ಗೆ ಒಪ್ಪಿ ಮತ್ತು ಪ್ರಚಾರ ಮಾಡಿ ಈಗ ವೈಯಕ್ತಿಕ ಕಾರಣಗಳಿಂದ ನಿಮ್ಮಿಂದ ದೂರ ಸರಿದು, ತಾವು ಒಪ್ಪಿದ ''ಲಿಂಗದೇವ'' ಪದಕ್ಕೆ ವಿರುದ್ಧವಾಗಿ ಪ್ರಚಾರ ಮಾಡುತ್ತ, ನೀವು ಬರೆದ ಪ್ರಾರ್ಥನೆಯನ್ನು ಬಿಟ್ಟು, ಈಗ ತಮ್ಮದೇ ಆದ ಪ್ರಾರ್ಥನೆಯನ್ನು ಬರೆದು '' ಮಾತಾಜಿಯವರು ಬರೆದ ಪ್ರಾರ್ಥನೆಯನ್ನು ಕೇವಲ ಬಸವ ದಳದವರು ಹೇಳಬೇಕೇ ವಿನಾ ಬೇರೆಯವರಲ್ಲ. '' ಎಂದು ಕೆಲವು ಸಂಘಟನೆಕಾರರು ಹೇಳುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣ ನೀಡಿ.

★ ಶರಣರ ಜೀವನದಲ್ಲಿ ತತ್ವನಿಷ್ಠೆ ಎನ್ನುವುದು ಬಹಳ ಮಹತ್ವಪೂರ್ಣ. ಅಲ್ಲಿ ಹೊರ-ಒಳಗೆ ವಂಚನೆ ಇರುವುದಿಲ್ಲ. ಅಂತರಂಗದಲ್ಲಿ ನಂಬಿದುದನ್ನು ಹೊರಗೆ ಅಳವಡಿಸಿಕೊಳ್ಳಬೇಕು. ಸತ್ಯವೆಂದು ತಿಳಿದುದನ್ನು ಪ್ರಾಣವನ್ನು ಪಣಕ್ಕಿಟ್ಟಾದರೂ ಆಚರಿಸಬೇಕು. ಒಂದು ವೇಳೆ ''ಲಿಂಗದೇವ'' ಪರಮ ಸತ್ಯವೆಂದು ನಮ್ಮೊಡನೆ ಒಡನಾಡುವಾಗ ಮನವರಿಕೆಯಾಗಿದ್ದರೆ, ನಮ್ಮನ್ನು ಬಿಟ್ಟರೂ 'ಲಿಂಗದೇವ' ಸತ್ಯವಾಗಿಯೇ ಉಳಿಯಬೇಕಷ್ಟೆ ! ಹಾಗೆ ಮಾಡದೆ ನಮ್ಮೊಡನೆ ಒಡನಾಡುವಾಗ ನಮ್ಮ ಜನರ ಅಂದರೆ ಲಿಂಗದೇವ ಪ್ರಿಯರಿಂದ ಲಾಭ ಪಡೆದುಕೊಳ್ಳಲು ಇವರಂತೆ ನುಡಿದು, ನಮ್ಮನ್ನು ಬಿಟ್ಟಾಗ ಲಿಂಗದೇವ ವಿರೋಧಿಗಳ ಆದರ ಗಳಿಸಿಕೊಳ್ಳಲು ಅವರಂತೆ ನುಡಿದರೆ, ಇಂಥವರನ್ನು ಸಮಯಸಾಧಕರು (opportunists)ಎನ್ನಬೇಕಾಗುತ್ತದೆ. ಇಂಥ ಸಮಯ ಸಾಧಕತನವನ್ನು ಜಗದ ಕರ್ತ ಲಿಂಗದೇವನಾಗಲಿ, ಧರ್ಮಕರ್ತ ಬಸವಣ್ಣನವರಾಗಲಿ ಮೆಚ್ಚಿಕೊಳ್ಳುವುದಿಲ್ಲ. ತಾತ್ವಿಕವಾಗಿ, ಅರ್ಥಗರ್ಭಿತವಾಗಿ ನಾವು ಪ್ರಾರ್ಥನಾ ಗೀತೆ ಸ್ತುತಿ ಪದ್ಯ ಬರೆದಿರುವುದು ಎಲ್ಲರೂ ಅಳವಡಿಸಿಕೊಳ್ಳಲೆಂದೆ.

★

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಮಹಾಮನೆಯ ಆವರಣದಲ್ಲಿ

ಕಲ್ಯಾಣ ಪರ್ವ

2002 ರ ಮೇ 1,2 ಮತ್ತು 3 ರಂದು ನಡೆಯುವ ಕಾರ್ಯಕ್ರಮದ ರೂಪುರೇಷೆಗಳು

ಮೇ 1 ವಿಶ್ವಕಾಯಕ ದಿನ

ಬೆಳಗ್ಗೆ 10 ಗಂಟೆಗೆ ಜ್ಯೋತಿಗಳಿಗೆ ಸ್ವಾಗತ

10- 15 ಬಸವ ಧ್ವಜಾರೋಹಣ

10- 30 ಕಲ್ಯಾಣ ಜ್ಯೋತಿಯ ಪ್ರಜ್ವಲನ

11-00 ರಿಂದ 2-30 ಉದ್ಘಾಟನಾ ಸಮಾವೇಶ.

ಮಧ್ಯಾಹ್ನ 4-00 ರಿಂದ 6-00 ರಾಷ್ಟ್ರೀಯ ಭಾವೈಕ್ಯತಾಗೋಷ್ಠಿ

ವಿಷಯ : ಕಲ್ಯಾಣ ರಾಜ್ಯದ ಪರಿಕಲ್ಪನೆ

ಸಂಜೆ 6-30 ರಿಂದ 9-00 ಕಾಯಕ ಕಲಿ ಮಡಿವಾಳ ಮಾಚಿದೇವರ ಜಯಂತಿ ಆಚರಣೆ.

ವಿಷಯ : ಬಸವ ತತ್ವ ಮತ್ತು ಸಮಾಜದ ಸರ್ವಾಂಗೀಣ ಅಭಿವೃದ್ಧಿ

9 ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

ಮೇ 2 ಶರಣ ವಂದನ ದಿನ

ಬೆಳಗ್ಗೆ 7- 30 ರಿಂದ 9- 30 ಸಾಮೂಹಿಕ ಇಷ್ಟಲಿಂಗಾರ್ಚನೆ

11-00 ರಿಂದ 2- 30 ಸಾಮೂಹಿಕ ಪ್ರಾರ್ಥನೆ

ಶರಣಾರ್ಥಿ - ಶರಣ ವಂದನ ಮತ್ತು ಉಪನ್ಯಾಸ

ಮಧ್ಯಾಹ್ನ 4-00 ರಿಂದ 6-00 ಪಥ ಸಂಚಲನ, ಮೆರವಣಿಗೆ ಬಸವ ಕಲ್ಯಾಣದ ಮಧ್ಯಭಾಗದಲ್ಲಿರುವ ಬಸವೇಶ್ವರ ವೃತ್ತ ಅಥವಾ ಬಸವೇಶ್ವರ ದೇವಾಲಯದಿಂದ

ಸಂಜೆ 6- 30 ರಿಂದ 9-00 ಧರ್ಮ ಚಿಂತನಗೋಷ್ಠಿ

ವಿಷಯ : ಬಸವ ಧರ್ಮ ಪರಿಪೂರ್ಣ ಧರ್ಮ

9 ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

ಮೇ 3 ಶೂನ್ಯ ಪೀಠ ಸ್ಥಾಪನೆಯ ಸಂಸ್ಮರಣೋತ್ಸವ ಮತ್ತು ಸಮಾರೋಪ ಸಮಾರಂಭ

ಬೆಳಗ್ಗೆ 10- 30 ರಿಂದ 2- 30

ಸಂಜೆ 6- 30 ರಿಂದ ಪೂಜ್ಯ ಸ್ವಾಮಿಗಳವರಿಂದ ಉಪನ್ಯಾಸಗಳು. ಸಮಾರೋಪ ಸಮಾರಂಭದ ನಂತರ ಊರಿಗೆ ತೆರಳಬೇಕು ಎನ್ನುವವರಿಗೆ ಅನುಮತಿ ಇದೆ. ಸಾಕಷ್ಟು ಜನರು ಇನ್ನೂ ಉಳಿದಿರುವುದರಿಂದ ಭಾಗವಹಿಸಿದ ಪೂಜ್ಯ ಸ್ವಾಮಿಗಳು ಮತ್ತು ಪೂಜ್ಯ ಮಾತೆಯವರುಗಳಿಂದ ಪ್ರವಚನ ಏರ್ಪಡಿಸಲಾಗುತ್ತದೆ.

ಸಾಮೂಹಿಕ ಇಷ್ಟಲಿಂಗ ಪೂಜೆ, ಪ್ರಾರ್ಥನೆ ಮತ್ತು ಪಥ ಸಂಚಲನ

ಶರಣ ಬಂಧುಗಳೇ,

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನಡೆಯುತ್ತಿರುವ ಕಲ್ಯಾಣ ಪರ್ವವು

Digitalised by e Sahithya Documentataion Forum
Sponsored by Sarayu Foundation Trust

ಮಹತ್ವಪೂರ್ಣ ಐತಿಹಾಸಿಕ ಸಮಾವೇಶ. ಕಲ್ಯಾಣ ಕ್ರಾಂತಿಯಿಂದ ನೊಂದು ಕಲ್ಯಾಣವನ್ನು ತೊರೆದಿದ್ದ ಆದಿ ಶರಣರ ದಿವ್ಯ ಸಂಕಲ್ಪಗಳನ್ನು ಶರಣ ಸಂತಾನವಾದ ನಾವು ನೀವೆಲ್ಲರೂ ಪೂರೈಸುವ ಸುವರ್ಣ ಸಮಯವೀಗ ಒದಗಿ ಬಂದಿದೆ. ಕಲ್ಯಾಣ ಪರ್ವದ ಕಾರ್ಯಾಕ್ರಮದ ವಿವರ ನೀಡಲಾಗಿದೆ. ಇದರಲ್ಲಿ ಅತ್ಯಂತ ಪವಿತ್ರ ಧಾರ್ಮಿಕ ವಿಧಿ ಎಂದು ಭಾವಿಸಿ ಆಚರಿಸಬೇಕಾದುವು ಎಂದರೆ ಮೇ 2 ರಂದು ನಡೆಯುವ

1. ಸಾಮೂಹಿಕ ಇಷ್ಟಲಿಂಗಾರ್ಚನೆ - ಬೆಳಗ್ಗೆ 7-30
2. ಸಾಮೂಹಿಕ ಪ್ರಾರ್ಥನೆ ಮತ್ತು ಶರಣ ವಂದನೆ - 10-30
3. ಬಸವಣ್ಣನವರ ಭಾವಚಿತ್ರ ಮೆರವಣಿಗೆ, ಪಥ ಸಂಚಲನ ಸಂಜೆ 4 ರಿಂದ

ಈ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುವ ಎಲ್ಲರೂ ಕಡ್ಡಾಯವಾಗಿ ಬಿಳಿಯ ಬಟ್ಟೆ ಧರಿಸಿ ಮೇಲೆ ಕಾವಿಯ ಪವಿತ್ರ ವಸ್ತ್ರ(ಸ್ಕಾರ್ಫ್) ಧರಿಸಬೇಕು. ಷಟ್‌ಕೋನ ಚಿತ್ರ ಮುದ್ರಿತವಾಗಿರುವ ಬಿಳಿಯ ಟೋಪಿಗಳನ್ನು ಶರಣರು ಧರಿಸಬೇಕು. ಪಾದಯಾತ್ರೆಯಲ್ಲಿ ಹೇಗೇಗೋ ಕುಣಿಯದೆ ಮಂತ್ರಘೋಷ ಮಾಡುತ್ತ ಶಾಂತವಾಗಿ ಸಾಗಬೇಕು. ಇಷ್ಟಲಿಂಗಾರ್ಚನೆಗೆ ಮಜ್ಜನ ಪಾತ್ರೆ, ಲೋಟ, ವಿಭೂತಿ ಮುಂತಾದ ಸಾಮಾನು ತಂದಿರಬೇಕು.

ಶೂನ್ಯ ಪೀಠಾರೋಹಣ ಸಂಸ್ಮರಣೆ

ಮೇ 3 ರಂದು ಬೆಳಗ್ಗೆ 10-30 ರಿಂದ ಪ್ರಾರಂಭವಾಗುತ್ತದೆ. 12ನೇ ಶತಮಾನದ ಅನುಭವ ಮಂಟಪದ ಮಹತ್ ಸಾಧನೆಗಳಲ್ಲಿ ಒಂದು ಶೂನ್ಯಪೀಠ ಸ್ಥಾಪನೆ ಮತ್ತು ವ್ಯೋಮಕಾಯ ಸಿದ್ಧ ಅಲ್ಲಮ ಪ್ರಭುದೇವರ ಪೀಠಾರೋಹಣ. ಇದು ನಡೆದುದು ವಿಶ್ವಾವಸು ಸಂವತ್ಸರದ ಚೈತ್ರ ಮಾಸದ ಶುದ್ಧ ಪ್ರತಿಪದೆಯಂದು. ಯುಗಾದಿ ದಿವಸ ಸೋಮವಾರದಂದು ರೇವತಿ ನಕ್ಷತ್ರದಲ್ಲಿ ಪೀಠಾರೋಹಣವು ನೆರವೇರಿತು. ಜಾತಿಯಿಂದ ಗುರುತ್ವ ಬರದು, ಸಾಧನೆಯಿಂದ ಬರುತ್ತದೆ ಎಂಬ ಬಸವ ವಾಣಿಯನ್ನು ಸಾಕಾರಗೊಳಿಸಿ, ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದ ಅಲ್ಲಮ ಪ್ರಭುವನ್ನು ಪೀಠಾರೋಹಣ ಮಾಡಿಸಿದ ಕೀರ್ತಿ ಬಸವಣ್ಣನವರದು. ಇಂಥ ಶೂನ್ಯ ಪೀಠ ಸ್ಥಾಪನೆಯಾದುದು ಕ್ರಿ.ಶ. 1185 ರಲ್ಲಿ. ಅದರ ಸಂಸ್ಮರಣೆಯನ್ನು ಆಚರಿಸಲಾಗುವುದು. ಅದರೊಡನೆಯೇ ಕಲ್ಯಾಣ ಪರ್ವದ ಸಮಾರೋಪ ಸಮಾರಂಭ ಜರುಗುವುದು.

2002 ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬರುವ ಹಬ್ಬ - ಹುಣ್ಣಿಮೆ - ಉತ್ಸವಗಳು

ಶೂನ್ಯ ಪೀಠ ಸ್ಥಾಪನೆಯ ಸಂಸ್ಮರಣಾ ದಿನ, ಅಲ್ಲಮ ಪ್ರಭು ಜಯಂತಿ (ಯುಗಾದಿ)	ಏಪ್ರಿಲ್	13
ಡಾ॥ ಅಂಬೇಡ್ಕರ್ ಜಯಂತಿ	ಏಪ್ರಿಲ್	14
ಜಗನ್ಮಾತಾ ಅಕ್ಕಮಹಾದೇವಿ ಜಯಂತಿ	ಏಪ್ರಿಲ್	27
ಮಡಿವಾಳ ಮಾಚಿದೇವ ಜಯಂತಿ	ಮೇ	1
ಕಲ್ಯಾಣ ಪರ್ವ	ಮೇ	1,2,3
ಸಮುದಾಯ ಪ್ರಾರ್ಥನೆ, ಶರಣ ಸ್ಮರಣೆ	ಮೇ	2
ಬಸವ ಜಯಂತಿ	ಮೇ	14

ಬಸವ ಕಲ್ಯಾಣ - ಸ್ಥಳ ನಿರ್ದೇಶನ ಮತ್ತು ವಾಹನಾನುಕೂಲ

ಬೀದರ್ ಜಿಲ್ಲೆಯ ತಾಲ್ಲೋಕು ಕೇಂದ್ರ ಬಸವ ಕಲ್ಯಾಣ. ಮುಂಬಯಿ-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ 9 ಕ್ಕೆ ಸನಿಹದಲ್ಲಿದೆ. ಹೈದರಾಬಾದಿನಿಂದ ಸುಮಾರು 185 ಕಿ.ಮೀ, ಸೊಲ್ಲಾಪುರದಿಂದ 120 ಕಿ.ಮೀ ದೂರದಲ್ಲಿದೆ. ಬೆಂಗಳೂರಿನಿಂದ-ಹೈದರಾಬಾದ್ ಮಾರ್ಗವಾಗಿ ಹೋದರೂ 770 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 13, ಚಿತ್ರದುರ್ಗ, (ಕೂಡಲ ಸಂಗಮ) ಬಿಜಾಪುರ, ಸೊಲ್ಲಾಪುರ ಮಾರ್ಗವಾಗಿ ಹೋದರೂ ಅಷ್ಟೇ ದೂರ. ಟ್ರೇನ್ ಮೂಲಕ ಗುಲಬರ್ಗಾಕ್ಕೆ ಹೋಗಿ ಅಲ್ಲಿಂದ ಬಸ್ಸಿನಲ್ಲಿ ಬಸವ ಕಲ್ಯಾಣಕ್ಕೆ ಬರಬಹುದು.

ಗುಲಬರ್ಗಾ ರಾಷ್ಟ್ರೀಯ ಬಸವ ದಳದವರು ಬಸವ ಮಂಟಪದಲ್ಲಿ (ಗುಲಬರ್ಗಾದ ಮಹಂತ ನಗರದ ಖೂಬಾ ಪ್ಲಾಟ್‌ದಲ್ಲಿ ಸಿವಿಲ್ ಕೋರ್ಟ್ ಮತ್ತು ಪಾಟೀಲ್ ದವಾಖಾನೆಯ ಸಮೀಪದಲ್ಲಿ ರಾಷ್ಟ್ರೀಯ ಬಸವ ದಳದ ಬಸವ ಮಂಟಪ ಇದೆ) ದಿ. 30-4-2002 ರಂದು ಆಗಮಿಸುವ ಶರಣ ಬಂಧುಗಳಿಗೆ ಸ್ನಾನ-ಪೂಜೆ-ಉಪಾಹಾರ-ಊಟದ ವ್ಯವಸ್ಥೆ ಮಾಡುತ್ತಿರುವರು. ಇದರ ಸದುಪಯೋಗ ಮಾಡಿಕೊಳ್ಳಬಹುದು. ಬಸ್ ಸ್ಟ್ಯಾಂಡ್, ರೇಲ್ವೆ ಸ್ಟೇಷನ್ ಬಳಿ ಒಳ್ಳೆಯ ಲಾಡ್ಜಿಂಗ್‌ಗಳಿವೆ. ಅಲ್ಲಿಯೇ ಸ್ನಾನ - ಪೂಜೆ - ಉಪಾಹಾರ ಮುಗಿಸಿ, ಕಲಬುರ್ಗಿಯಲ್ಲಿ ಶರಣ ಬಸವೇಶ್ವರ ದೇವಾಲಯ, ಬಸವ ಮಂಟಪ ಸಂದರ್ಶಿಸಿ ಬಸವ ಕಲ್ಯಾಣಕ್ಕೆ ಬರಬಹುದು

ರೈಲ್ವೆ ವಿವರ :

1. ಕರ್ನಾಟಕ ಎಕ್ಸ್‌ಪ್ರೆಸ್. Train No. 2627 (super fast) ಬೆಂಗಳೂರು ಬಿಡುವ ವೇಳೆ. ಸಂಜೆ 6-25, ಗುಲಬರ್ಗಾ ತಲುಪುವ ವೇಳೆ ಮುಂಜಾನೆ 5-50. ದಿನ ನಿತ್ಯವೂ ಹೊರಡುವುದು.
2. ಉದ್ಯಾನ್ ಎಕ್ಸ್‌ಪ್ರೆಸ್. Train No. 6530. ಬೆಂಗಳೂರು ಬಿಡುವ ವೇಳೆ ರಾತ್ರಿ 8-30. ಗುಲಬರ್ಗಾ ತಲುಪುವ ವೇಳೆ ಬೆಳಿಗ್ಗೆ 8-35.
3. ಕುರ್ಲಾ ಎಕ್ಸ್‌ಪ್ರೆಸ್, ಕೊಯಮತ್ತೂರು - ಕುರ್ಲಾ. Train No. 1014. ಬೆಂಗಳೂರು ಬಿಡುವ ವೇಳೆ ಮಧ್ಯಾಹ್ನ 12-45. ಗುಲಬರ್ಗಾ ತಲುಪುವ ವೇಳೆ ರಾತ್ರಿ 12-30.
4. ಬೆಂಗಳೂರು - ನಾಂದೇಡ್ Link Express, Train No. 6592 A ಬೆಂಗಳೂರು ಬಿಡುವ ವೇಳೆ ರಾತ್ರಿ 10 ಗಂಟೆ, ಬೀದರ್ ತಲುಪುವ ವೇಳೆ ಮರುದಿನ ಮಧ್ಯಾಹ್ನ 2-50, ಭಾಲ್ಕಿ ಮಧ್ಯಾಹ್ನ 3-40. ಈ ಟ್ರೇನ್ ನಿಧಾನವಾಗಿ ಹೋಗುತ್ತದೆ. ಗುಲಬರ್ಗಾಕ್ಕೆ ಹೋಗುವುದಿಲ್ಲ. ಬೀದರ್, ಭಾಲ್ಕಿಗೆ ಹೋಗುತ್ತದೆ. ಭಾಲ್ಕಿಯಿಂದ ಬಸವ ಕಲ್ಯಾಣ ಕೇವಲ 35 ಕಿ.ಮೀಟರ್.

ವಾರದಲ್ಲಿ ಒಂದು ದಿನ ಹೋಗುವ ಟ್ರೇನ್‌ಗಳು

5. ಕೊಯಮತ್ತೂರು - ರಾಜಕೋಟ್. Train No. 6614. ಶನಿವಾರ ಮಾತ್ರ ಹೊರಡುತ್ತದೆ. ಬೆಂಗಳೂರಿನ ಕೃಷ್ಣರಾಜಪುರಂ ನಿಲ್ದಾಣದಿಂದ. ಹೊರಡುವ ವೇಳೆ ಬೆಳಗ್ಗೆ 8-00, ಗುಲಬರ್ಗಾ ತಲುಪುವ ವೇಳೆ ಸಾಯಂಕಾಲ 7-30.
6. ಬೆಂಗಳೂರು - ಅಹಮದಾಬಾದ್ ಎಕ್ಸ್‌ಪ್ರೆಸ್. Train No. 6502 ರವಿವಾರ ಮಾತ್ರ.

Digitalised by e Sahithya Documentataion Forum
Sponsored by Sarayu Foundation Trust

ಬೆಂಗಳೂರಿನಂದ ಮಧ್ಯಾಹ್ನ 1-30 ಕ್ಕೆ ಬಿಡುವುದು, ಗುಲಬರ್ಗಾ ತಲುಪುವ ವೇಳೆ ಬೆಳಗಿನ ಜಾವ 1-45 ಕ್ಕೆ ತಲುಪುತ್ತದೆ.

ಕರ್ನಾಟಕ ಎಕ್ಸ್‌ಪ್ರೆಸ್, ಉದ್ಯಾನ್ ಎಕ್ಸ್‌ಪ್ರೆಸ್ ಗುಲಬರ್ಗಾ ತಲುಪಲು ಬಹಳ ಅನುಕೂಲಕರವಾಗಿವೆ. ಅದೇ ರೀತಿ ವಾಪಸ್ಸು ಬರಲು ಸಹ ಅನುಕೂಲಕರವಾಗಿವೆ. ದಿ. 29-4-2002 ರ ರಾತ್ರಿ ಬೆಂಗಳೂರಿನಿಂದ ಹೊರಡಬಹುದು.

ಗುಲಬರ್ಗಾದಿಂದ ಪುನಃ ಹೊರಡಲು ಇರುವ ಟ್ರೇನ್

1. ಉದ್ಯಾನ್ ಎಕ್ಸ್‌ಪ್ರೆಸ್. ಗುಲಬರ್ಗಾದಿಂದ ಸಂಜೆ 6-50, ಬೆಂಗಳೂರು ತಲುಪುವುದು 8-35
2. ಕರ್ನಾಟಕ ಎಕ್ಸ್‌ಪ್ರೆಸ್. ಗುಲಬರ್ಗಾದಿಂದ ರಾತ್ರಿ 2-00 ಬೆಂಗಳೂರು ತಲುಪುವುದು ಮಧ್ಯಾಹ್ನ 2-00
3. ಕುರ್ಲಾ-ಕೊಯಮತ್ತೂರು ಎಕ್ಸ್‌ಪ್ರೆಸ್, ಗುಲಬರ್ಗಾ ಬೆಳಿಗ್ಗೆ 9-20, ಬೆಂಗಳೂರು ತಲ್ಪುವುದು ರಾತ್ರಿ 11.

ಬೆಂಗಳೂರಿನ ಬಸವ ಮಂಟಪದಿಂದ ದಿ. 29-4-2002 ರಂದು ಮಧ್ಯಾಹ್ನ 1 ಗಂಟೆಗೆ ಹೈಟೆಕ್ ಬಸ್ಸು ಹೊರಡಿಸಲಾಗುವುದು. ಪುನಃ ದಿ. 4-4-2002 ರಂದು ಬಸವ ಕಲ್ಯಾಣದಿಂದ ಬಸ್ಸು ಹೊರಡುವುದು.

ಬೆಂಗಳೂರಿಂದ ಬಸವ ಕಲ್ಯಾಣಕ್ಕೆ ಇರುವ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು.

1. ಮಧ್ಯಾಹ್ನ 1 ಗಂಟೆಗೆ, ಚಿತ್ರದುರ್ಗ, ಹೊಸಪೇಟೆ, ಲಿಂಗಸೂರು, ಸುರಪುರ-ಶಹಾಪುರ, ಜೇವರ್ಗಿ, ಗುಲಬರ್ಗಾ ಮಾರ್ಗವಾಗಿ ಬಸವ ಕಲ್ಯಾಣವನ್ನು ಬೆಳಿಗ್ಗೆ 6 ಗಂಟೆಗೆ ತಲುಪುತ್ತದೆ.
2. ಮಧ್ಯಾಹ್ನ 3-30 ಕ್ಕೆ, ಹೈದ್ರಾಬಾದ್ ಮಾರ್ಗವಾಗಿ ಬಸವ ಕಲ್ಯಾಣಕ್ಕೆ ಬೆಳಿಗ್ಗೆ 7-30 ಕ್ಕೆ ತಲುಪುವುದು. ಟ್ರೇನ್, ಬಸ್ಸುಗಳಿಗೆ ರಿಸರ್ವೇಷನ್ ಮಾಡಿಸಲು ನೆರವಾಗುವ ಕಾರಣ ಅಗತ್ಯವಿರುವವರು ಎಲ್ಲ ವಿವರಗಳಿಗಾಗಿ ಫೋನ್ ಅಥವಾ ಪತ್ರದ ಮೂಲಕ ಸಂಪರ್ಕಿಸಿರಿ.

ಶರಣ. ನಿತ್ಯಾನಂದ, ಬಸವ ಮಂಟಪ, 2035, 2ನೇ ಬ್ಲಾಕ್
20ನೇ ಮೇಯಿನ್, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು - 560010
ದೂರವಾಣಿ ಸಂಖ್ಯೆ : 3325335/3322790

ಬಸವ ದರ್ಶನ

ಬಸವ ಮಾಡಿದೊಡಾಯ್ತು ಗುರುನೆಲೆ
ಬಸವ ಮಾಡಿದೊಡಾಯ್ತು ಲಿಂಗವು
ಬಸವ ಮಾಡಿದೊಡಾಯ್ತು ಜಂಗಮವರಿದ ಮಹಿಮಂಗೆ
ಬಸವನಿಂಧ್ಯಾತ್ಮವೇ ಪಸರಿಸಿತು
ಲೋಕದೊಳಂತು ಕಾರಣ ಬಸವಣ್ಣನೇ
ಪರದೈವವೆನುತಿರ್ದ ಗುರುರಾಯ

-ಚಾಮರಸ

ಬಸವ ಕಲ್ಯಾಣದಲ್ಲಿ ವಸತಿಯ ಅನುಕೂಲತೆ.

ಕಲ್ಯಾಣ ಪರ್ವ ಉತ್ಸವ ಸಮಿತಿಯಿಂದ ಬಸವ ಮಹಾಮನೆಯ ಆವರಣದಲ್ಲಿ ತಾತ್ಕಾಲಿಕ ಶಾಮಿಯಾನಾ, ಕೊಠಡಿ ಮತ್ತು ಡಾರ್ಮಿಟರಿ ಹಾಕಲಾಗುವುದು. ಇದಲ್ಲದೆ ಬಸವ ಕಲ್ಯಾಣದಲ್ಲಿ ಅನೇಕ ವಸತಿ ಗೃಹಗಳಿವೆ. ಡೀಲಕ್ಸ್, ಹವಾನಿಯಂತ್ರಿತ ಕೋಣೆಗಳಿಂದ ಹಿಡಿದು ಸಾಮಾನ್ಯ ಕೋಣೆಗಳವರೆಗೆ ಬಾಡಿಗೆಗೆ ಲಭ್ಯವಿರುತ್ತವೆ. ಡೀಲಕ್ಸ್ ಕೋಣೆ (ದಿನವೊಂದಕ್ಕೆ ಸುಮಾರು 500 ರೂ), ಸಾಮಾನ್ಯ ಕೋಣೆ (ದಿನಕ್ಕೆ 125 ರೂ) ಯವರೆಗೆ ಲಭ್ಯವಾಗುತ್ತವೆ. ಅಗತ್ಯವಿರುವವರು ಉಪಯೋಗಿಸಿಕೊಳ್ಳಬಹುದು. ಮೊದಲೇ ದೂರವಾಣಿ ಅಥವಾ ಪತ್ರ ಮುಖಾಂತರ ತಿಳಿಸಿದರೆ ಕಾಯ್ದಿರಿಸಲಾಗುವುದು

ಬೆಂಗಳೂರು ಬಸವ ಮಂಟಪದಿಂದ ಬಸ್ ವ್ಯವಸ್ಥೆ

ಬೆಂಗಳೂರಿನ ಬಸವ ಮಂಟಪದಿಂದ 35 ಸೀಟುಗಳ ಸುಖಾಸೀನದ ಬಸ್ಸಿನ ವ್ಯವಸ್ಥೆ ಮಾಡಲಾಗುತ್ತಿದೆ. ಈ ಬಸ್ಸು ಏಪ್ರಿಲ್ 30 ನೆಯ ತಾರೀಖು ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಬಿಡುತ್ತದೆ. ಮಾರ್ಗ ಮಧ್ಯೆ ಮಧ್ಯಾಹ್ನದ ಊಟ, ರಾತ್ರಿ ಊಟ (ಸಂಸ್ಥೆಯಿಂದ ಕೊಡಲಾಗುವುದು) ಕ್ಕೆ ಅನುಕೂಲಕರ ಸ್ಥಳದಲ್ಲಿ ಬಸ್ಸು ನಿಲ್ಲಿಸಲಾಗುವುದು. ನೇರವಾಗಿ ಬಸವ ಕಲ್ಯಾಣವನ್ನು ಬಸ್ಸು ಮೇ 1 ರ ಬೆಳಿಗ್ಗೆ ತಲುಪುವುದು. ಪುನಃ ಮೇ 3ನೇ ದಿನಾಂಕ ಸಂಜೆಗೆ ಬಸ್ಸು ಬಸವ ಕಲ್ಯಾಣದಿಂದ ಹೊರಟು ಬೆಂಗಳೂರನ್ನು 4 ರ ಬೆಳಿಗ್ಗೆ ತಲುಪುವುದು.

ಬಸವ ಕಲ್ಯಾಣದಲ್ಲಿ ಕೆಲವು ಸಂದರ್ಶನೀಯವಾದ ಸ್ಥಳಗಳು ಚದುರಿದಂತೆ ಇವೆ. ಅದಕ್ಕಾಗಿ ಇದೇ ಬಸ್ಸಿನಲ್ಲಿಯೇ ಯಾತ್ರಿಗಳನ್ನು ಕರೆದೊಯ್ದು ತೋರಿಸಲಾಗುವುದು. ಸ್ವತಂತ್ರವಾದ ವಾಹನವಿಲ್ಲದೆ ಸಾರ್ವಜನಿಕ ವಾಹನಗಳಲ್ಲಿ ಬಂದವರಿಗೂ ಈ ರೀತಿ ಸಂದರ್ಶನ ಮಾಡಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಒಬ್ಬರಿಗೆ ಸಾಮಾನ್ಯ ಪ್ರತಿನಿಧಿ ಶುಲ್ಕ 100 ರೂ ಸೇರಿ 1000 (ಒಂದು ಸಾವಿರ) ರೂಗಳು. ಹೆಚ್ಚಿನ ಕಾಣಿಕೆಯನ್ನು ಸ್ವಯಂ ಪ್ರೇರಣೆಯಿಂದ ನೀಡುವವರು ಪ್ರತ್ಯೇಕವಾಗಿ ನೀಡಬಹುದು. ವಸತಿಗಾಗಿ ಉತ್ಸವ ಸಮಿತಿಯವರು ನೀಡುವ ತಾತ್ಕಾಲಿಕ ಕೋಣೆಗಳಿರುತ್ತವೆ. ಲಾಡ್ಜಿಂಗ್‌ದಲ್ಲಿ ಕೋಣೆ ಬೇಕೆನ್ನುವವರು ಅದರ ಚಾರ್ಜು ಪ್ರತ್ಯೇಕವಾಗಿ ಕೊಡಬೇಕು. ಆದಷ್ಟು ಬೇಗನೆ ಸೀಟುಗಳನ್ನು ಕಾಯ್ದಿರಿಸಿಕೊಳ್ಳಬೇಕು. ಹಣವನ್ನು ಬ್ಯಾಂಕ್ ಡ್ರಾಫ್ ಮೂಲಕ ಕಳಿಸಬೇಕು. ಬ್ಯಾಂಕ್ ಡ್ರಾಫ್ಟ್ ತೆಗೆಸುವವರು ವಿಶ್ವಕಲ್ಯಾಣ ಮಿಷನ್, ಬೆಂಗಳೂರು ಎಂದು ತೆಗೆಸಬೇಕು.

ಶರಣ. ನಿತ್ಯಾನಂದ, ಬಸವ ಮಂಟಪ
2035, 20ನೇ ಮುಖ್ಯರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-10

Digitalised by e Sahithya Documentataion Forum
Sponsored by Sarayu Foundation Trust

ಅಪೂರ್ವ ಯಶಸ್ಸಿನ ವಿಶ್ವಧರ್ಮ ಪ್ರವಚನ ಕಾರ್ಯಕ್ರಮದ ಸಮಾರೋಪ ಸಮಾರಂಭ

ಬೀದರ್ ಮಾರ್ಚ್ 23.-ಬೀದರ್ ನಗರದ ಸರಕಾರಿ ಆಸ್ಪತ್ರೆಯ ಹಿಂಭಾಗದಲ್ಲಿರುವ ಬ್ಯಾಕ್‌ವರ್ಡ್ ಕ್ಲಾಸ್‌ನ ಹಾಸ್ಟೆಲ್ ಮೈದಾನದಲ್ಲಿ ಸುಮಾರು ಎರಡು ತಿಂಗಳ ಕಾಲ ವಿಶ್ವದ ದ್ವಿತೀಯ ಮಹಿಳಾ ಜಗದ್ಗುರುಗಳು, ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧೀಶರಾದ ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ಪ್ರತಿನಿತ್ಯ ಸಾಯಂಕಾಲ 6-30 ರಿಂದ 8-30 ಗಂಟೆಯವರೆಗೆ ಐತಿಹಾಸಿಕ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಸಾವಿರಾರು ಶರಣರ ಹೃನ್ಮನಗಳನ್ನು ತಣಿಸುತ್ತ ಸಾಗಿ ಬಂದಿದ್ದು, ಬೀದರ್ ಜನತೆಗೆ ಧಾರ್ಮಿಕ ತರಬೇತಿಯನ್ನು ಒದಗಿಸಿತು ಎಂದರೆ ತಪ್ಪಾಗಲಿಕ್ಕಿಲ್ಲ.

ಅಭೂತಪೂರ್ವದ ಜನಾಕರ್ಷಣೆಯನ್ನು ಪಡೆದು ಭರದಿಂದ ಸಾಗಿ ಬಂದ ಪ್ರವಚನ ಸಮಾರೋಪ ಸಮಾರಂಭವೂ ಕೂಡ ವಿಜೃಂಭಣೆಯಿಂದ ಅಷ್ಟೇ ಅರ್ಥಪೂರ್ಣವಾಗಿ ವಿಶ್ವಧರ್ಮ ಪ್ರವಚನ ವೇದಿಕೆಯ ಮೇಲೆ ಜರುಗಿತು.

ಪ್ರವಚನ ಸಮಾರೋಪಕ್ಕೆಂದೇ ಬಸವ ಧರ್ಮದ ಮಹಾ ಜಗದ್ಗುರು ಪೀಠದ ಪೀಠಾಧೀಶರೂ, ರಾಷ್ಟ್ರೀಯ ಬಸವ ದಳ ಕೇಂದ್ರ ಸಂಸ್ಥೆಯ ಕಾರ್ಯಾಧ್ಯಕ್ಷರು, ಕ್ರಾಂತಿಕಾರಿ ಧರ್ಮ ಪ್ರಚಾರಕರು (ಲಕ್ಷಾಂತರ ಜನರ ಬದುಕಿಗೆ ಅರ್ಥವನ್ನು ಕಲ್ಪಿಸಿಕೊಟ್ಟಿರುವ) ವಿಶ್ವದ ಪ್ರಥಮ ಮಹಿಳಾ ಗುರುಗಳೂ ಆದ ಕನ್ನಡದ ಕಣ್ಮಣಿ ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ(ಮಾತಾಜಿ)ಯವರಿಗೆ ವಿಶ್ವಧರ್ಮ ಪ್ರವಚನ ಸಮಿತಿ ಆತ್ಮೀಯ ಆಮಂತ್ರಣವನ್ನು ಕೊಟ್ಟಿತು. ಅಪಾರ ಶಿಷ್ಯ ವೃಂದದ ಕರೆಗೆ ಓಗೊಟ್ಟು ಮಾತಾಜಿ ಬೀದರ್‌ಗೆ 21-03-2002 ರಂದು ಆಗಮಿಸುತ್ತಿದ್ದಂತೆಯೆ, ತಾತ್ವಿಕ ಸಂಘಟನೆಯ ಧೀರೂದಾತ್ತ ಧ್ಯೇಯವನ್ನು ಹೊಂದಿರುವ ಹಿಮ್ಮೆಟ್ಟದ ಧೀರರ ತಂಡವಾದ ರಾಷ್ಟ್ರೀಯ ಬಸವ ದಳ ಏರ್ಪಡಿಸಿದ, ಅಲಂಕೃತವಾದ ವಾಹನದಲ್ಲಿ ಪೂಜ್ಯ ಶ್ರೀ ಮಾತೆ ಗಂಗಾದೇವಿ ಹಾಗೂ ಪೂಜ್ಯ ಶ್ರೀ ಮಾತೆ ಮಹಾದೇವಿ ಹಾಗೂ ಧರ್ಮಕರ್ತ ವಿಶ್ವಗುರು ಬಸವಣ್ಣನವರ ಭಾವಚಿತ್ರಗಳ ಮೆರವಣಿಗೆ ನೋಡುಗರ ಕಣ್ಣಿಗೆ ಅರ್ಥವತ್ತಾದ ರಸದೌತಣವನ್ನು ಮಾಡಿಸುತ್ತಿತ್ತು. ರಾಷ್ಟ್ರೀಯ ಬಸವ ದಳದ ಶರಣರ ಶರಣೆಯರ ಉಲ್ಲಾಸ ಭರಿತ ಜಯಘೋಷಗಳೊಂದಿಗೆ ನಡೆದ ನೃತ್ಯ ಶೈಲಿಗಳು ಜನಾಕರ್ಷಣೆಯನ್ನು ಪಡೆದರೆ ಎಲ್ಲಾ ಶರಣರು ಬಿಳಿ ವಸ್ತ್ರ ಹಾಗೂ ಸ್ಕಾರ್ಫ್ ಧರಿಸಿ ನಡು ರಸ್ತೆಯಲ್ಲಿ ಸಾಯಂಕಾಲ ಸರಿಯಾಗಿ 7 ಗಂಟೆಗೆ ನಡೆಸಿದ ಸಂಕ್ಷಿಪ್ತ ಪ್ರಾರ್ಥನೆ 'ನೆನಹು' ಕಾರ್ಯಕ್ರಮ ಧಾರ್ಮಿಕ ಶ್ರದ್ಧೆಯ ಪರಿಚಯ ಮಾಡಿಕೊಟ್ಟಿತು.

ಬಸವಣ್ಣನವರ ಕಾರ್ಯಕ್ಷೇತ್ರ ಶರಣಭೂಮಿ ಬಸವಕಲ್ಯಾಣದಲ್ಲಿ ಜಾಗತಿಕ ಮಟ್ಟದ ಧಾರ್ಮಿಕ ಸಮ್ಮೇಳನ ಕಲ್ಯಾಣ ಪರ್ವವನ್ನು ವಿಶ್ವ ಕಾಯಕ ದಿನ ಮೇ 1ರ ನಿಮಿತ್ತ ಕಾಯಕವೇ ಕೈಲಾಸವೆಂದು ಸಾರಿದ ಪುಣ್ಯ ಭೂಮಿಯಾದ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸುತ್ತಾ ಸದರಿ ಕಾರ್ಯಕ್ರಮದ ಧ್ಯೇಯೋದ್ದೇಶಗಳ ಸಂಪೂರ್ಣ

ಪರಿಚಯವನ್ನು ದಿನಾಂಕ : 22-03-2002 ರಂದು ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಮಾಡಿಸಿಕೊಟ್ಟರು.

ದಿನಾಂಕ : 23-03-2002 ರಂದು ಆದಿ ಪ್ರಮಥ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಸಂಕ್ಷಿಪ್ತ ಪ್ರಾರ್ಥನೆ ನೆನಹುವಿನೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮೊಟ್ಟ ಮೊದಲಿಗೆ ಲಿಂಗಾಯತ ಧರ್ಮ ಮಹಾಸಭಾ ಕರ್ನಾಟಕ ರಾಜ್ಯದ ಉಪಾಧ್ಯಕ್ಷರಾದ ಶಿವರಾಜ ಪಾಟೀಲ ಅತಿವಾಳ ಸರ್ವರಿಗೂ ಸ್ವಾಗತ ಕೋರಿದರು.

ಬೀದರನ ಜನಪ್ರಿಯ ಶಾಸಕರಾದ ಶರಣ. ಶ್ರೀ ರಮೇಶಕುಮರ್ ಪಾಂಡೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಾ "ಮಾತೆ ಗಂಗಾದೇವಿಯವರು ಪ್ರತಿನಿತ್ಯ ಸಂಜೆಯಾಗುತ್ತಲೇ ಸುಮಾರು 2 ಸಾವಿರ ಜನರನ್ನು ಒಂದು ಕಡೆಗೆ ಕುಳ್ಳಿರಿಸುವ ಹಾಗೂ ತದೇಕ ಚಿತ್ತದಿಂದ ತಾಸುಗಟ್ಟಲೇ ಅಲುಗಾಡದಂತೆ ಮಾಡಬಲ್ಲ ಶಕ್ತಿ ಧರ್ಮಕ್ಕಿದೆ ಎಂದು ಸಿದ್ಧಮಾಡಿ ತೋರಿಸಿದ್ದಾರೆ. ಇದು ಸಾಮಾನ್ಯ ವಿಷಯವಲ್ಲ" ಎಂದು ನುಡಿದರು.

ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ರೇಣುಕಾ ವಿದ್ಯಾ ಸಂಸ್ಥೆಯ ಅಧ್ಯಕ್ಷರು, ದಲಿತ ಮುಖಂಡರೂ ಆದ ಶರಣ ಪಾಂಡುರಂಗ ಸೂರ್ಯವಂಶಿಯವರು ಮಾತನಾಡುತ್ತ "ಪೂಜ್ಯ ಮಾತಾಜಿಯವರ ದೈವೀಶಕ್ತಿಯ ಸಾಕಾರ. ಅವರು ಇಡುವ ಒಂದೊಂದು ಹೆಜ್ಜೆಯೂ ಸತ್ಯ ಸ್ಥಾಪನೆಯ ದಿಶೆಯಲ್ಲಿ ಮೈಲಿಗಲ್ಲುಗಳಾಗಿವೆ. 'ಲಿಂಗದೇವರ ಪರಿಕಲ್ಪನೆಯನ್ನೇ ತೆಗೆದುಕೊಂಡರೆ ಅದರಲ್ಲಿ ಎಂಥಾ ಸತ್ಯವಿದೆ ಎಂಬುದು ಗೋಚರವಾಗುತ್ತದೆ. ಕೆಲವರು ಮತ್ಸರದಿಂದ ವಿರೋಧಿಸಲು ಹೋಗುತ್ತಾರೆ. ಕಡೆಗೆ ಸತ್ಯವೇ ಗೆಲ್ಲುತ್ತದೆ. ಹೀಗಾಗಿ ನಾವು ಪೂಜ್ಯ ಮಾತಾಜಿಯವರ ಮಾತುಗಳನ್ನು ಆಲಿಸಿ ಸಂತೋಷ ಪಡುವುದಷ್ಟೇ ಅಲ್ಲ ಧೈರ್ಯವಾಗಿ ಬೆಂಬಲಿಸಬೇಕು ಮತ್ತು ಅನುಷ್ಠಾನಕ್ಕೆ ತರಬೇಕು ಎಂದು ನುಡಿದರು.

ಮೊದಲಿಗೆ ಮಾತಾಜಿಯವರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಗೆ ಜನ್ಮವಿತ್ತ ತಂದೆ ಮಾಣಿಕಪ್ಪ ಬೆಣ್ಣೆ, ಬೀದರ್ ಶಾಸಕ ರಮೇಶ ಪಾಂಡೆ, ಬಸವ ಕಲ್ಯಾಣದ ಬಸವ ಮಹಾಮನೆ ಉಸ್ತುವಾರಿ ನೋಡಿಕೊಳ್ಳುತ್ತಿರುವ ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿಯವರನ್ನು ಸತ್ಕರಿಸಿದರು. ಹಾಗೂ ಬಸವಕಲ್ಯಾಣದ ಅಭಿವೃದ್ಧಿಗಾಗಿ ಧನಸಹಾಯ ಗೈದ ಎಲ್ಲ ಶರಣ ಬಂಧುಗಳಿಗೂ ಧರ್ಮಕರ್ತರ ಕೃಪೆ ನಿಮ್ಮ ಮೇಲಿರಲಿ ಎಂದು ಹಾರೈಸಿ ಆಶೀರ್ವದಿಸಿ ಶುಭ ಹಾರೈಕೆ ಪತ್ರಗಳನ್ನು ವಿತರಿಸಿದರು. ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಶರಣ. ಸುಭಾಷ್ ಪಾಟೀಲ್, ಹೈದ್ರಾಬಾದ್, ಅಧ್ಯಕ್ಷರು, ರಾಷ್ಟ್ರೀಯ ಬಸವದಳ ಆಂಧ್ರ ಪ್ರದೇಶ ಇವರು "ಹತ್ತಾರು ಸಲ ಕೂಲಂಕುಷವಾಗಿ ವಿಚಾರ ಮಾಡಿ ಚಿಂತೆನೆಮಾಡಿ ಒಂದು ನಿರ್ಧಾರವನ್ನು ತೆಗೆದುಕೊಂಡ ಮೇಲೆ ಎಂದೆಂದಿಗೂ ಹಿಂಜರಿಯುವ ಪ್ರವೃತ್ತಿ ನಮ್ಮದಲ್ಲ ಮತ್ತು ಅದು ಬಸವಧರ್ಮಕ್ಕೆ ಸಲ್ಲದು. ಆದುದರಿಂದ ಸಮರ್ಥ ಗುರುವನ್ನು ಪಡೆದ ನಾವು ಸಮರ್ಥ ಶಿಷ್ಯರಾಗಿ ಎಂಥದೇ ಪರಿಸ್ಥಿತಿಯನ್ನು ಎದುರಿಸಲು ಹೋರಾಡಲು ತಯಾರಾಗಬೇಕು." ಎಂದು ಕಿವಿಮಾತು ಹೇಳಿದರು.

ಸುಮಾರು 10 ರಿಂದ 12 ಸಾವಿರ ನೆರೆದಿದ್ದ ಸಭೆಯ ಸಮ್ಮುಖವನ್ನು 60 ದಿವಸಗಳ ಕಾಲ

Digitalised by e Sahithya Documentataion Forum
Sponsored by Sarayu Foundation Trust

ಪ್ರವಚನ ಕಾರ್ಯಕ್ರಮ ನಡೆಸಿಕೊಟ್ಟ ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ವಹಿಸಿದ್ದರು. ನೇತೃತ್ವವನ್ನು ಪೂಜ್ಯ ಚನ್ನಯ್ಯ ಸ್ವಾಮಿಗಳು, ಲಿಂಗಾಯತ ಸಮಾಜ, ಬಸವ ಮಂಟಪ ಬೀದರ್ ಹಾಗೂ ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮಿಗಳು, ಜಗದ್ಗುರು ಅಲ್ಲಮ ಪ್ರಭು ಮಠ, ಚಟ್ನಳ್ಳಿ ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಷ್ಟ್ರೀಯ ಬಸವದಳ ಜಿಲ್ಲಾ ಘಟಕ ಬಸವ ಮಂಟಪ ಬೀದರನ ಶರಣೆ ಚಂದ್ರಮ್ಮ ಪಾಟೀಲ್ ಗಾದಗಿ ವಹಿಸಿದ್ದರು. ಉಭಯ ಮಾತಾಜಿಯವರನ್ನು ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಸಮಾಜದ ಪರವಾಗಿ ಸತ್ಕರಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನವನ್ನು ನೀಡುತ್ತಾ ಮಾತಾಜಿಯವರು ಬಸವಣ್ಣನವರ ಉತ್ತರಾಧಿಕಾರಿಗಳಾದ ಬೀದರ ಜಿಲ್ಲೆಯ ಪ್ರತಿಯೊಬ್ಬರಲ್ಲಿಯೂ ಬಸವಣ್ಣನವರ ಬಗ್ಗೆ ಅಭಿಮಾನ ಅವರಿಗೆ ಗೊತ್ತಿಲ್ಲದಂತೆ ತುಂಬಿಕೊಂಡಿದೆ. ಸಮಾಜದ ಬಗ್ಗೆ ಧರ್ಮದ ಬಗ್ಗೆ ಅಪಾರ ಕಳಕಳಿ ಇದೆ, ದೊಡ್ಡ ಮನಸ್ಸು ಇದೆ. ಇದಕ್ಕೆ ಸಾಕ್ಷಿ ಎಂಬಂತೆ ರಾಜ್ಯಕ್ಕೆ ಮಾದರಿಯಾಗುವಂತೆ ಪ್ರತಿಯೊಂದು ಕಾರ್ಯಕ್ರಮಗಳೂ ಬೀದರನಲ್ಲಿ ನಿರೀಕ್ಷೆಗಿಂತ ಹೆಚ್ಚು ಯಶಸ್ವಿಯಾಗುತ್ತವೆ. ದೇಣಿಗೆ ಕೊಡುವುದರಲ್ಲಿಯೂ ಮೊದಲಿಗರಾಗಿದ್ದಾರೆ. ಭಕ್ತರ ಹೃದಯಾಂತರಾಳದ ಅಭಿಮಾನವೇ ನಮ್ಮನ್ನು ಇಲ್ಲಿಯವರೆಗೆ ಧರ್ಮಕ್ಷೇತ್ರ ಅಭಿವೃದ್ಧಿ ಪಡಿಸಲು ಧೈರ್ಯ ತುಂಬಿದೆ. ಇನ್ನು ಕಲ್ಯಾಣ ಪರ್ವಕ್ಕೂ ಉದಾರ ಮನಸ್ಸಿನ ಭಕ್ತರ ಕಾಣಿಕೆಯೊಂದೇ ಸಕಲ ಆವಶ್ಯಕತೆಗಳನ್ನು ಖಂಡಿತ ಪೂರೈಸುತ್ತದೆ ಎನ್ನುವ ದೃಢ ವಿಶ್ವಾಸ ನಮಗಿದೆ'' ಎಂದು ಅಭಿಮಾನ ಪೂರ್ವಕವಾಗಿ ತಿಳಿಸಿದರು.

ಮುಂದುವರೆದು ಮಾತನಾಡುತ್ತಾ ''ಇಡೀ ಜಗತ್ತಿಗೆ ಎರವಲು ಕೊಡುವಂತ ತಾತ್ವಿಕ ಸಂಪತ್ತು ನಮ್ಮ ಸಾಹಿತ್ಯದಲ್ಲಿ ಇದೆ. ಮೊಟ್ಟ ಮೊದಲು ನಮ್ಮಲ್ಲಿರುವ ಸಂಪತ್ತಿನ ಬೆಲೆಯ ಅರಿವು ನಮಗಾಗಬೇಕಿದೆ. ಅದಕ್ಕಾಗಿ ನಾವು ವಚನ ಸಾಹಿತ್ಯದಲ್ಲಡಗಿರುವ ತಾತ್ವಿಕ, ತರ್ಕಬದ್ಧವಾದ, ವೈಜ್ಞಾನಿಕ ಅಂಶಗಳನ್ನು ಮೈಗೂಡಿಸಿಕೊಂಡು ಬಾಳಬೇಕಾಗಿದೆ, ನನ್ನೊಂದಿಗೆ ಸಮಾಜವನ್ನು ಮುನ್ನಡೆಸಬೇಕಾಗಿದೆ.'' ಎಂದು ತಿಳಿಸುತ್ತಾ ಶರಣ ಸಂಸ್ಕೃತಿಗೆ ಅನುಗುಣವಾಗಿ ವಾರಗಳನ್ನು ಮರು ನಾಮಕರಣ ಮಾಡಲಾಗಿದೆ ಎಂದ ತಿಳಿಸಿದರು.

ವೇದಿಕೆಯ ಮೇಲೆ ರಾಷ್ಟ್ರೀಯ ಬಸವ ದಳ ಜಹಿರಾಬಾದಿನ ಶರಣ. ಶ್ರೀ ಶಂಕ್ರೆಪ್ಪ ಪಾಟೀಲ, ಹುಲಸೂರಿನ ಶಿವಲಿಂಗಯ್ಯ ಸ್ವಾಮಿ, ಚಂದ್ರಪ್ಪ ಗೌರಶೆಟ್ಟಿ, ಸ್ವಾತಂತ್ರ್ಯ ಹೋರಾಟಗಾರರಾದ ಮಾದಪ್ಪ ಲೋಖಂಡೆ, ಲಿಂಗಾಯತ ಧರ್ಮ ಮಹಾಸಭಾ ಬಸವ ಕಲ್ಯಾಣ ತಾಲ್ಲೂಕ ಅಧ್ಯಕ್ಷ ವೀರಣ್ಣ ಗಡಿಗೌಡಗಾಂವ, ಮಹಾಂತಯ್ಯಾ ಸ್ವಾಮಿ, ಗಂಗಶೆಟ್ಟಿ ಪಾಟೀಲ ವಕೀಲರು, ಮಾಜಿ ಸಚಿವರಾದ ಸುಭಾಷ ಆಸ್ಟೂರೆ, ರಾಮಲಿಂಗಪ್ಪ ದೇವಣೆ ಇನ್ನಿತರರು ಆಸೀನರಾಗಿದ್ದರು. ಶರಣ. ಬಸವರಾಜ ಸಂಗಮದ ಕಾರ್ಯಕ್ರಮ ನಿರ್ವಹಿಸಿದರು, ಶರಣ. ಶಿವನಾಥ ನೀಲಂಗೆ ಶರಣು ಸಮರ್ಪಣೆ ಗೈದರು. ಕಾರ್ಯಕ್ರಮದ ಮಂಗಲದ ನಂತರ ಎಲ್ಲ ಶರಣ ಬಂಧುಗಳಿಗೆ ಸಿಹಿ ಪ್ರಸಾದ ವಿತರಣೆ ಮಾಡಲಾಯಿತು.

ವರದಿ-ನಾಗಶೆಟ್ಟಿ, ಕೆ. ಶೆಟಕಾರ

ಸಹ ಕಾರ್ಯದರ್ಶಿ, ರಾಷ್ಟ್ರೀಯ ಬಸವದಳ, ಬೀದರ್

ಕಾರ್ಯಕ್ರಮ ವರದಿ

ಬಸವ ಮಹಾಮನೆಯಲ್ಲಿ
ಶರಣ ಗಣಮೇಳ ಮತ್ತು ಸಾಮೂಹಿಕ ಇಷ್ಟಲಿಂಗಾರ್ಚನೆ

ಬಸವ ಕಲ್ಯಾಣ, ಮಾರ್ಚ್ 15.-ಇಷ್ಟಲಿಂಗವು ಯಾವುದೋ ಒಂದು ಜಾತಿ, ಮತ, ಅಥವಾ ಪಂಥಕ್ಕೆ ಸೀಮಿತವಲ್ಲ. ಇದು ವಿಶ್ವಾತ್ಮನ ಕುರುಹು. ಯಾರು ಬೇಕಾದರೂ ದೀಕ್ಷೆ ಪಡೆದುಕೊಂಡು ಇಷ್ಟಲಿಂಗವನ್ನು ಧರಿಸಿ ಪೂಜಿಸ ಬಹುದೆಂದು ಕೂಡಲ ಸಂಗಮದ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ನುಡಿದರು.

ಮಹಾಶಿವರಾತ್ರಿ ಸರ್ವಶರಣರ ದಿನಾಚರಣೆಯ ಅಂಗವಾಗಿ ಬಸವ ಮಹಾಮನೆಯ ಆವರಣದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಏರ್ಪಡಿಸಲಾಗಿತ್ತು. ಪೂಜಾ ಕಾರ್ಯಕ್ರಮದ ಸನ್ನಿಧಿ ವಹಿಸಿ ಶ್ರೀಗಳು ಪೂಜೆಯ ಮಹತ್ವವನ್ನು ವಿವರಿಸಿದರು. ಶಿವಕುಮಾರ ಲಿಂಗಾಯತ್ ಅವರು ಪೂಜೆಯ ವಿಧಾನವನ್ನು ತಿಳಿಸಿದರು. ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿಯವರು ಮೊದಲಿಗೆ ಬಸವ ಧ್ವಜಾರೋಹಣ ನೆರವೇರಿಸಿದರು. ಶರಣ. ವಿರೂಪಾಕ್ಷಪ್ಪ ಕೊಳ್ಳೂರ ಅವರು ಧರ್ಮಪಿತ ಬಸವಣ್ಣನವರ ಪೂಜೆ ಮಾಡಿದರು. ಬೌದ್ಧ ಧರ್ಮ ಪ್ರಚಾರಕ ಶ್ರೀ ಮಿಲಿಂದ ಗುರೂಜಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಇಷ್ಟಲಿಂಗ ಪೂಜೆಯನ್ನು ವೀಕ್ಷಿಸಿದರು. ''ನಾನು ಬೌದ್ಧಧರ್ಮ ಪ್ರಚಾರಕ ಆದರೂ ಬಸವ ಧರ್ಮದ ಅಭಿಮಾನಿಯಾಗಿದ್ದೇನೆ. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದರ್ಶನ ಪಡೆದು ನಾನು ಧನ್ಯನಾಗಿದ್ದೇನೆ.'' ಎಂದು ಹಿಂದಿಯಲ್ಲಿ ತುಂಬ ಮಾರ್ಮಿಕವಾಗಿ ನುಡಿದರು.

ಬಸವ ಕಲ್ಯಾಣ ಪಟ್ಟಣದ ರಾಷ್ಟ್ರೀಯ ಬಸವ ದಳದ ಮುಖಂಡರಾದ ಶರಣ. ಬಸವರಾಜ ಪಾಟೀಲ, ವೀರಣ್ಣ ಬಿರಾದಾರ, ಪ್ರಭು ಹೊಳಕುಂದೆ, ಗುರುನಾಥ ದುರ್ಗೆ ಮುಂತಾದ ಗಣ್ಯರು ಹಾಗೂ ಸುತ್ತಲಿನ ಹಳ್ಳಿಗಳಿಂದ ಆಗಮಿಸಿದ ನೂರಾರು ಜನ ಶರಣ - ಶರಣೆಯರು ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗವಹಿಸಿದರು.

ಮಾರ್ಚ್ 13 ರಂದು ಬಸವ ಮಹಾಮನೆಯ ವ್ಯವಸ್ಥಾಪಕಿ ಪೂಜ್ಯ ಮಾತೆ ನೀಲಗಂಗಾದೇವಿಯವರ ನೇತೃತ್ವದಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ 57ನೆಯ ವರ್ಧಂತಿ ಉತ್ಸವವನ್ನು ಭಕ್ತಿ-ಶ್ರದ್ಧೆಯಿಂದ ಆಚರಿಸಲಾಯಿತು. ಪರಮ ಪೂಜ್ಯ ಈ ಸಂದರ್ಭದಲ್ಲಿ ಶ್ರೀ ಬಸವೇಶ್ವರ ಪೂಜಾವ್ರತ ಮಾಡಲಾಯಿತು. ಪ್ರಾರ್ಥನೆ ಮಾತಾಜಿಯವರಿಗೆ ಆಯುಷ್ಯ ಆರೋಗ್ಯವನ್ನು ಹಾರೈಸಿ ಶ್ರೀ ಗುರು ಬಸವಣ್ಣನವರಲ್ಲಿ

-ಶಿವಕುಮಾರ ಡಾಕುಳಗೆ

ಸಲ್ಲಿಸಲಾಯಿತು.

ತಟ್ಟೆ-ಲೋಟಗಳ ದಾನ

ಈಗಾಗಲೇ ಧಾರವಾಡ, ಬೀದರ ಶರಣ ಬಂಧುಗಳು ಅನೇಕರು ಪೂಜ್ಯ ಮಾತಾಜಿಯವರ ಹುಟ್ಟು ಹಬ್ಬವನ್ನು ನಿಮಿತ್ತ ಮಾಡಿಕೊಂಡು ಸ್ಟೀಲ್ ತಟ್ಟೆ, ಲೋಟಗಳನ್ನು ಕಾಣಿಕೆ ರೂಪದಲ್ಲಿ ನೀಡಿದ್ದಾರೆ. ಸಾವಿರಾರು ತಟ್ಟೆಗಳು ಬೇಕಾಗುವ ಕಾರಣ ದಾನಿಗಳು ತಂದು ಕೊಡಬೇಕೆಂದು ಸೂಚಿಸುವೆವು. 'ಹನಿ ಹನಿಗೂಡಿದರೆ ಹಳ್ಳ' ಎಂಬ ನಾಣ್ಣುಡಿಯಂತೆ ಕಲ್ಯಾಣ ಪರ್ವದಲ್ಲಿ ಭಾಗಿಗಳಾಗುವ ಎಲ್ಲರೂ ಒಂದು ತಟ್ಟೆ, ಲೋಟ ಜೊತೆಗೆ ತಂದು 3 ದಿವಸಗಳ ಕಾಲ ಉಪಯೋಗಿಸಿ ಹೋಗುವಾಗ ಕೊಟ್ಟು ಹೋದರೆ ಸಹಜವಾಗಿ ತಟ್ಟೆ ಸಂಗ್ರಹವಾಗುತ್ತವೆ. ಹೆಚ್ಚಿನ ಅನುಕೂಲತೆ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ತಂದು ಕೊಡಿರಿ.

Digitalised by e Sahithya Documentataion Forum
Sponsored by Sarayu Foundation Trust

ಬಸವ ತತ್ತ ಪ್ರಸಾರ ಯಾತ್ರೆಗೆ ನಿರ್ಧಾರ

ಬಸವಕಲ್ಯಾಣ, ಮಾರ್ಚ್ 26- ಜಿಲ್ಲೆಯಾದ್ಯಂತ ಇದೇ ಏಪ್ರಿಲ್ 1 ರಿಂದ ಬಸವತತ್ವ ಪ್ರಸಾರ ಯಾತ್ರೆ ಹಮ್ಮಿಕೊಳ್ಳಲು ಸ್ಥಳೀಯ ಅನುಭವ ಮಂಟಪದಲ್ಲಿ ಈಚೆಗೆ ನಡೆದ ಸಮಾಜದ ಗಣ್ಯರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ವಿ. ಸಿದ್ಧರಾಮಣ್ಣ, ಶಿವಯೋಗೀಶ್ವರ ಸ್ವಾಮಿಗಳು, ಶಿವಾನಂದ ಸ್ವಾಮಿಗಳು, ಬೇಲೂರಿನ ಶಿವಕುಮಾರ ದೇವರು, ಜಿಲ್ಲಾ ಬಸವಕೇಂದ್ರದ ಅಧ್ಯಕ್ಷ ಡಿ. ಕಾಶೀನಾಥಪ್ಪ, ಶರಣಪ್ಪ ಮಿಠಾರೆ, ವೈಜನಾಥ ಕಾಮಶೆಟ್ಟಿ, ಡಾ|| ಎಸ್.ಬಿ. ದುರ್ಗೆ, ಸೋಮಣ್ಣ ನಡುಕಟ್ಟಿ, ಸಿದ್ರಾಮಪ್ಪ ಬಾಲಪ್ಪಗೋಳ, ಬಸವರಾಜ ನಾಗೂರೆ, ಮಲ್ಲಪ್ಪ ಧಬಾಲೆ, ಶಿವರುದ್ರಪ್ಪ ಪುಲಾರೆ ಮತ್ತಿತರ ಗಣ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು. ಕೌಠಾದ ಸಿದ್ರಾಮ ಶರಣರು ಬೆಲ್ದಾಳ್ ಅವರು ಅಧ್ಯಕ್ಷತೆ ವಹಿಸಿದ್ದರು.

ತತ್ವ ಪ್ರಸಾರ ಹಾಗೂ ಜನಜಾಗೃತಿಗಾಗಿ ಹಮ್ಮಿಕೊಳ್ಳಲಾಗಿರುವ ಈ ಯಾತ್ರೆಯು ಏಪ್ರಿಲ್ 1 ರಿಂದ 20ರವರೆಗೆ ನಡೆಯಲಿದೆ. ಯಾತ್ರೆಯ ಅಂತಿಮ ದಿನ ಬಸವಕಲ್ಯಾಣದಲ್ಲಿ ಬೃಹತ್ ಸಮಾವೇಶ ನಡೆಯಲಿದೆ.

ವಿವಿಧ ಮಠಾಧೀಶರಿಗೆ ಮತ್ತು ಪ್ರಮುಖರಿಗೆ ಆಯಾ ತಾಲೂಕುಗಳಲ್ಲಿ ಪ್ರಚಾರ ಕಾರ್ಯ ವಹಿಸಿಕೊಡಲಾಗಿದೆ. ಬಸವಕಲ್ಯಾಣ ತಾಲೂಕಿನಲ್ಲಿ ಬೇಲೂರಿನ ಶಿವಕುಮಾರ ದೇವರು, ಹುಮನಾಬಾದ ತಾಲೂಕಿನಲ್ಲಿ ಶಿವಾನಂದ ಸ್ವಾಮಿಗಳು, ಭಾಲ್ಕಿ ತಾಲೂಕಿನಲ್ಲಿ ಶಿವಯೋಗೀಶ್ವರ ಸ್ವಾಮಿಗಳು ಮತ್ತು ಔರಾದನಲ್ಲಿ ಸಿದ್ಧರಾಮ ಶರಣರು ಬೆಲ್ದಾಳ ಅವರು ತತ್ವ ಪ್ರಸಾರ ನಡೆಸುವರು. ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷ ಡಿ. ಕಾಶೀನಾಥ ಮತ್ತು ಶರಣಪ್ಪ ಮಿಠಾರೆ ಅವರು ಪ್ರಸಾರ ಕಾರ್ಯ ಕೈಗೊಳ್ಳುವರು.

ಪ್ರಜಾವಾಣಿ, ದಿನಾಂಕ : 27-03-2002

ಅಭಿನಂದನೀಯ ಕಾರ್ಯಕ್ರಮ

ಅನುಭವ ಮಂಟಪ ಟ್ರಸ್ಟ್‌ನವರು ಬಸವ ತತ್ತ್ವ ಪ್ರಚಾರದ ಕಾರ್ಯಕ್ರಮವನ್ನು ಏಪ್ರಿಲ್ 1 ರಿಂದ 20 ರವರೆಗೆ ಹಮ್ಮಿಕೊಂಡಿರುವುದು ಅಭಿನಂದನೀಯ. ವಿಧಾಯಕವಾದ (positive)ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಅದರಿಂದ ಸಮಾಜಕ್ಕೆ ಉಪಕಾರ, ತತ್ತ್ವದ ಪ್ರಚಾರ ಸಾಧ್ಯವಾಗುತ್ತದೆ ಮಾತ್ರವಲ್ಲ ಇನ್ನೊಬ್ಬರು ಮಾಡುವ ಸೃಜನಾತ್ಮಕ ಕಾರ್ಯಕ್ರಮಗಳಿಗೆ ಅಡ್ಡಿ ಮಾಡುವ ಹವ್ಯಾಸ ಕಡಿಮೆಯಾಗುತ್ತದೆ. ಜೊತೆಗೆ ಕ್ರಿಯಾಶೀಲವಾದ ಮನಸ್ಸಿಗೆ ಋಣಾತ್ಮಕ (negative) ಕೆಲಸ ಮಾಡಲು ಸಮಯವೂ ದೊರೆಯದು.

ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ಬೈಬಲ್‌ದಲ್ಲಿ ಒಂದು ಕಡೆ ಜನರ ಅಜ್ಞಾನ ನೋಡಿ ಏಸು ಹೇಳುತ್ತಾರೆ, ''ಕೊಯ್ಯಲು ತೆನೆ ಬಹಳ ಇವೆ. ಆದರೆ ಕೊಯಿಲು ಮಾಡುವವರು ಕಡಿಮೆ ಇದ್ದಾರೆ'' ಎಂದು ವಿಷಾದಿಸುತ್ತಾರೆ. ಹಾಗೆ ಇಂದು ಲಿಂಗಾಯತ ಸಮಾಜ, ಮತ್ತಿತರ ಸಮಾಜಗಳಲ್ಲಿ ಜನರು ಜ್ಞಾನಕ್ಕಾಗಿ ಹಸಿದಿದ್ದಾರೆ, ಬಾಯಾರಿದ್ದಾರೆ. ಎಷ್ಟು ಸಂಸ್ಥೆಗಳು, ಎಷ್ಟು ಜನರು ದುಡಿದರೂ ಸಾಲದು. ಆದ್ದರಿಂದ ಒಬ್ಬರು ಇನ್ನೊಬ್ಬರ ಕಾರ್ಯಗಳಿಗೆ ವಿರೋಧ ಮಾಡುವುದಕ್ಕಿಂತ ಎಲ್ಲರೂ ತಮ್ಮ ಕೈಲಿ ಆದಷ್ಟು ಧರ್ಮಪ್ರಚಾರ ಮಾಡಿದರೆ ಎಷ್ಟು ಚಂದ ! ಹಿಂದು ಸಮಾಜದಲ್ಲಿ ವೈರುಧ್ಯತೆ ನಡುವೆ ವಿಲಕ್ಷಣ ಏಕತೆ ಇದೆ. ಹರದ್ವಾರ, ಋಷಿಕೇಶಗಳನ್ನು ಅತ್ಯಂತ ಪವಿತ್ರ ತಾಣಗಳೆಂದು ನಂಬಿರುವ ಹಿಂದು ಮಠಾಧೀಶರು ಆ ಸ್ಥಳಗಳಲ್ಲಿ ತಮ್ಮ ಮಠದ ಶಾಖೆಗಳನ್ನು ತೆರೆಯುತ್ತಾರೆ. ವರ್ಷದಲ್ಲಿ ಆಗಾಗ ಕಾರ್ಯಕ್ರಮ ಹಮ್ಮಿಕೊಂಡು ತಮ್ಮ ಭಕ್ತರನ್ನು ಕರೆತರುತ್ತಾರೆ. ಅನ್ನದಾಸೋಹ, ಜ್ಞಾನ ದಾಸೋಹ ಮಾಡುತ್ತಾರೆ. ಅದೇ ರೀತಿ ಲಿಂಗಾಯತ ಮಠಾಧೀಶರು ಕೂಡಲ ಸಂಗಮ, ಕಲ್ಯಾಣಗಳನ್ನು ಶ್ರದ್ಧಾಕೇಂದ್ರಗಳನ್ನಾಗಿ ಗುರುತಿಸಿಕೊಂಡು ತಮ್ಮ ಮಠದ ಶಾಖೆ ತೆರೆದು ಆಗಾಗ ಕಾರ್ಯಕ್ರಮಗಳನ್ನು ಮಾಡುತ್ತಿದ್ದರೆ ಅವರ ಮಠಗಳ ಭಕ್ತರೂ ಬರುತ್ತಾರೆ. ಅವರಲ್ಲೂ ಬಸವ ಭಕ್ತಿ ಬೆಳೆಯುತ್ತದೆ. ಕೂಡಲ ಸಂಗಮ, ಬಸವ ಕಲ್ಯಾಣಗಳು ಪ್ರಗತಿ ಸಾಧಿಸುತ್ತವೆ. ಬಸವ ತತ್ತ್ವ ಪ್ರಸಾರದ ಕಾರ್ಯವನ್ನು ಹಮ್ಮಿಕೊಂಡ ಅನುಭವ ಮಂಟಪದವರ ಪ್ರಯತ್ನಕ್ಕೆ ಯಶ ಸಿಗಲೆಂದು ಹಾರೈಸುತ್ತೇನೆ.

- ಮಾತಾಜಿ

14ನೇ ಪುಟದಿಂದ ಬಂದದ್ದು

ಹೀಗೆಂದುಕೊಳ್ಳಲು ನಾಚಿಕೆ. ಏಕೆಂದರೆ ಸಿಂಹದ ಹೊಟ್ಟೆಯಲ್ಲಿ ನರಿ ಹುಟ್ಟಿದಂತೆ ಇಂಥ ಬಸವ ಭಕ್ತರು) ಅವರಿಗೇನೂ ನೀವು ತಿಳಿಸಬೇಡಿರಿ. ನೀವಾಗಿಯೇ ಹೋಗಿರಿ, ಮುಖ್ಯ ರಸ್ತೆಯಲ್ಲಿ ಜ್ಯೋತಿಯೊಡನೆ ಸಂಚರಿಸಿ, ಮುಂದೆ ಸಾಗಿರಿ. ಜ್ಯೋತಿ ನಮ್ಮೂರಿಗೆ ಬರಬಾರದು ಎನ್ನುವ ಪಾಪಾತ್ಮರಿಂದ ಅವರ ಊರಿಗೆ ಬಂದ ಭಾಗ್ಯ ತಪ್ಪಿಹೋಗುತ್ತದೆ. ಈ ದುರ್ಜನರಿಗಾಗಿ ಆ ಊರಿಗೆ ಆಗುವ ಶುಭವನ್ನು ಏಕೆ ತಪ್ಪಿಸಬೇಕು ?'' ಎಂದು. ಅದರಂತೆ ನಮ್ಮವರು ಮಾಡಿದಾಗ ಎಲ್ಲರಿಗೂ ಆಶ್ಚರ್ಯ ಮತ್ತು ಆನಂದ. ಈ ಜ್ಯೋತಿ ಯಾತ್ರೆಯಿಂದ ಅಪೂರ್ವ ಧರ್ಮಜಾಗೃತಿ ಆಗುತ್ತಿದೆ. ಓರ್ವ ವ್ಯಕ್ತಿ ಬಡತನದಲ್ಲಿ ನೊಂದುನಲುಗಿ ಕಷ್ಟಪಟ್ಟು ಶ್ರೀಮಂತನಾಗುತ್ತಾನೆ. ಅವನ ಮಗನಿಗೆ ಅನಾಯಾಸವಾಗಿ ಸಂಪತ್ತು ಸಿಗುತ್ತದೆ; ಅವನ ಮೊಮ್ಮಗನಿಗೆ ಇನ್ನೂ ಹೆಚ್ಚಿನ ಸಂಪತ್ತು ಪ್ರಾಪ್ತಿಯಾಗುತ್ತದೆ. ಅದೇ ರೀತಿ ಭಕ್ತಿ ಪರಂಪರೆಯ ಮೂಲ ಪುರುಷನಾದ (ಮುತ್ತಜ್ಜ) ಶಿವನಿಂದ ಆರಂಭವಾಗಿ, ನಂತರ 12 ನೆಯ ಶತಮಾನದಲ್ಲಿ ಆರಂಭವಾದ ಶರಣ ಪರಂಪರೆಯ ವಾಹಿನಿಯೊಡನೆ ಸೇರಿಕೊಂಡು ಬಲಿಷ್ಠವಾದ ಒಂದು ದಾರ್ಶನಿಕ ಪರಂಪರೆಯ ವಾರೀಸುದಾರರಾಗಿರುವ ನಾವು ಭಾಗ್ಯಶಾಲಿಗಳು. ನಮ್ಮ ಅಜ್ಜರಜ್ಜರು ಸಂಪಾದಿಸಿದ ಭಕ್ತಿ ಸಂಪತ್ತನ್ನು ಇಂದು ಹೊಂದಿ ಹರ್ಷ ಪುಳಕಿತರಾಗುವ ಹೆಮ್ಮೆ ನಮ್ಮದು.

- ಮಾತಾಜಿ

ಬೆಂಗಳೂರು ಮತ್ತು ಬಸವ ಕಲ್ಯಾಣದ ವಿಳಾಸಗಳು

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035
2ನೇ ಬ್ಲಾಕ್, ಕಾರ್ಡ್ ರಸ್ತೆ
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
'ಸಂತೋಷ ನಿಲಯ', ವಿದ್ಯಾಶ್ರೀ ಕಾಲನಿ
ತ್ರಿಪುರಾಂತ, ಬಸವಕಲ್ಯಾಣ- 585327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 0848-652856/651921

Digitalised by e Sahithya Documentataion Forum
Sponsored by Sarayu Foundation Trust

2002 ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು.

ಬಸವ ಕಲ್ಯಾಣದಲ್ಲಿ ನಿರ್ಮಾಣವಾಗಲಿರುವ ಬಸವ ಮಹಾಮನೆಯ ನಿರ್ಮಾಣಕ್ಕೆ ದೇಣಿಗೆ ಸಲ್ಲಿಸಿದ ಶರಣ ಬಂಧುಗಳು.

1. ಶರಣೆ. ಶೀತಲ್ ಮತ್ತು ಕಾಶೀನಾಥ ಸೂರ್ಯವಂಶಿ, ಬೀದರ್	100000
2. ಶರಣೆ. ಚಂದ್ರಮ್ಮ ಅಣ್ಣೆಪ್ಪ ಪಾಟೀಲ್, ಗಾದಗಿ (ಸಿಂಗಲ್ ರೂಂ)	60000
3. ಶರಣೆ. ವಿದ್ಯಾವತಿ ಮತ್ತು ಗುರುನಾಥ್ ನಿಡಗುಂದೆ (ಸಿಂಗಲ್ ರೂಂ)	60000
4. ಶರಣೆ. ಮೀನಾಕ್ಷಿ ಮತ್ತು ಹಾವಶೆಟ್ಟಿ ಪಾಟೀಲ್, ಬೀದರ್ (ಸಿಂಗಲ್ ರೂಂ)	60000
5. ಶರಣೆ. ನೀಲಮ್ಮ ಮತ್ತು ವೀರಬಸಪ್ಪ ಪಾಟೀಲ್ (ಸಿಂಗಲ್ ರೂಂ)	60000
6. ಶರಣ. ರಾಜೇಂದ್ರ ಜೊನ್ನಿಕೇರಿ, ಬೀದರ್ ಮತ್ತು	
7. ಶರಣ. ಶೇಷಪ್ಪ ಬಿರಾದಾರ, ಬೀದರ್ ಸೇರಿ (ಸಿಂಗಲ್ ರೂಂ)	60000
8. ಶರಣೆ. ಶಕುಂತಲಾ ಚಂದ್ರಪ್ಪ ಹಂಗರಗಿ (ಸಿಂಗಲ್ ರೂಂ)	60105
9. ಶರಣೆ. ಪುತಳಾಬಾಯಿ ಮತ್ತು ಶರಣ. ಚಂದ್ರಪ್ಪ ಗೌರಶೆಟ್ಟಿ	50000
10. ಶರಣೆ. ಸುನಂದಮ್ಮ ಅಣ್ಣೆಪ್ಪ ಮಂಗಲಗಿ, ಬೀದರ್	31000
11. ಶರಣೆ. ಶರಣಮ್ಮ ಪ್ರಭುಶೆಟ್ಟಿ ಚಟ್ನಳ್ಳಿ	31000
12. ಶರಣೆ. ಲಕ್ಷ್ಮಿ ಮಲ್ಲಯ್ಯ ಸ್ವಾಮಿ,	11101
13. ಶರಣ. ಮಹಾಂತಪ್ಪ ಬಸವಣ್ಣೆಪ್ಪ, ಆಲುಗುಡೆ	11000
14. ಶರಣೆ. ಜಗದೇವಿ ವಿಶ್ವನಾಥ ಪಾಟೀಲ್, ಬೀದರ್	10000
15. ಶರಣೆ. ನಿರ್ಮಲಾ ಬಸವರಾಜ ಗಾಯತೊಂಡೆ	10001
16. ಶರಣಪ್ಪ ಚರಾಲಾ, ಲಾಡಗೇರಿ	6666
17. ಶರಣೆ. ವಿದ್ಯಾವತಿ ಚಂದ್ರಶೇಖರ ವಡ್ಡಿ	6666
18. ಶರಣೆ. ಸುಚಿತ್ರಾ ಶಂಕರಪ್ಪ ಚಿದ್ರಿ	6666
19. ಶರಣೆ. ಮಹಾದೇವಿ ಮಲ್ಲಿಕಾರ್ಜುನ ಮೂಲಗೆ, ಬೀದರ್	5000
20. ಶರಣೆ. ಸುನೀತಾ ಅಶೋಕ ಶೀಲವಂತರ, ಬೀದರ್	5000
21. ಶರಣೆ. ಸುಗ್ಗಲಾಬಾಯಿ ಶಂಕರಪ್ಪ ಚಲುವಾ, ಬೀದರ್	5000
22. ಶರಣೆ. ಲೀಲಾ ಬಸವರಾಜ ಸಂಗಮದ	5000
23. ಶರಣ. ಅಡವೆಪ್ಪ ಶಿವಲಿಂಗಪ್ಪ ಪಟ್ನೆ, ಗಡಿ ಕುಸನೂರು	5001
24. ಶರಣೆ. ಕಾವೇರಿ ಬಾಬೂರಾವ ಮಾಳಗಿ	5001
25. ಶರಣ. ಶಿವರಾಜ ಪಾಟೀಲ್ ಭಗವಂತರಾವ್ ಪಾಟೀಲ್	5001
26. ಶರಣೆ. ಬಸಮ್ಮ ಬಸವಂತರಾಯ ಬಿರಾದಾರ	5001
27. ಶರಣ. ಶ್ಯಾಮ ಅಶೋಕ ಎಲಿ	5001
28. ಶರಣೆ. ಶಾಂತಾಬಾಯಿ ರಾಚಪ್ಪ ಕೋಳಕೂರ	5001
29. ಶರಣೆ. ಮಂಗಲಾ ಸೂರ್ಯಕಾಂತ ಗಾಯತೊಂಡೆ	5001
30. ಮಹಾದೇವಮ್ಮ ಮಲ್ಲಿಕಾರ್ಜುನ ಜೇಲರ್	2001

ಕಲ್ಯಾಣ ಪರ್ವದ ಮತ್ತು ನಿತ್ಯ ದಾಸೋಹದ ನಿಧಿಯ ಪುದುವಟ್ಟಿಗೆ

1. ಶರಣ. ಬಸವರಾಜ್ ಅಡಿವೆಪ್ಪಾ ಬುಕ್ಕಾ, ಹಿಪ್ಪಳಗಾಂವ	5001
2. ಶರಣ. ಅಶೋಕ ಕುಮಾರ್ ಹಾವಗೆಪ್ಪ, ತಮಸಂಗೆ, ದಾಡಗಿ	5001
3. ಶರಣ. ಸುಭಾಷ್ ಪಾಟೀಲ್, ದಾಡಗಿ	5001
4. ಶರಣ. ಮಾಣಿಕರಾವ ಶ್ಯಾಮರಾವ ಪಾಟೀಲ್, ಕೇಸರ ಜವಳಗಾ	5001
5. ಶರಣೆ. ವಿದ್ಯಾವತಿ ಗುರುನಾಥ ನಿಡಗುಂದೆ, ಬೀದರ್	5001
6. ಶರಣೆ. ನಿರ್ಮಲಾ ಶಿವನಾಥ ನೀಲಂಗೆ, ಬೀದರ್	5001
7. ಶರಣೆ. ಜಗದೇವಿ ವಿಶ್ವನಾಥ ಪಾಟೀಲ್, ಬೀದರ್	5001
8. ಶರಣೆ. ಚಂದ್ರಕಲಾ ನಾಗಶೆಟ್ಟಿ ದಾಡಗೆ, ಬೀದರ್	5001
9. ಶರಣೆ. ಕಸ್ತೂರಿಬಾಯಿ ಕಂಟೆಪ್ಪ ಕುಸನೂರೆ, ಬೀದರ್	5001
10. ಶರಣೆ. ಶಕುಂತಲಾ ಶರಣಪ್ಪ ಎಮ್ಮಿ, ಬೀದರ್	5001
11. ಶರಣೆ. ಈರಮ್ಮ ವೈಜನಾಥ ಕೋರೆ, ಬೀದರ್	5001
12. ಶರಣೆ. ಶಕುಂತಲಾ ವಿಶ್ವನಾಥ ಬಿರಾದಾರ, ಬೀದರ್	5001
13. ಶರಣ. ಸಿದ್ಧರಾಮಪ್ಪ ಚಿರೋಟಿ, ಬೀದರ್	5001
14. ಶರಣೆ. ಸುನಂದಾ ಭೀಮರಾವ ಪೋಲೀಸ್ ಪಾಟೀಲ್, ಬೀದರ್	5101
15. ಶರಣೆ. ಇಂದುಮತಿ ಶಿವಶರಣಪ್ಪ ಪಾಟೀಲ್, ಬೀದರ್	5001
16. ಶರಣೆ. ಸುರೇಖಾ ಸಂಜೀವ ಕುಮಾರ ಶೀಲವಂತ, ಬೀದರ್	5101
17. ಶರಣ. ಅಶೋಕ ಶೀಲವಂತರ (ಹಳೆಂಬರ)	5001
18. ಶರಣೆ. ರಾಜಮ್ಮ ಸಿದ್ಧರಾಮಪ್ಪ ತಳವಾಡೆ	5001
19. ಶರಣೆ. ಸತ್ಯವತಿ ಶಿವಶಂಕರ್ ಪಾಟೀಲ್	5001
20. ಶರಣ. ಸಚ್ಚಿನ್ ಬಸವರಾಜ್ ಪಾಟೀಲ್	

ಬಸವ ಕಲ್ಯಾಣದಲ್ಲಿ ಆರಂಭವಾಗಲಿರುವ ನಿತ್ಯ ದಾಸೋಹ ನಿಧಿಗೆ 1200 ರೂ ಸಲ್ಲಿಸಿದವರು

ಶರಣರುಗಳಾದ :

ಶ್ರೀದೇವಿ ಬುದ್ಧಿಮಾನ್ ಬಡದಾಳೆ, ಕೇಸರ ಜವಳಗಾ
ನಾಗಶೆಟ್ಟಿ ಕಟಾಳೆ, ಕೇಸರ ಜವಳಗಾ
ಚಂದ್ರಕಾಂತ ಸಂಗಪ್ಪ ಕರಕಲ್ಲೆ, ಕೇಸರ ಜವಳಗಾ
ಮಾಧವರಾವ್ ಕಾಶೀನಾಥ ತಾಂಬೋಳೆ, ಕೇಸರ ಜವಳಗಾ
ಶಂಕರೆಪ್ಪ ಬಸವಣ್ಣೆಪ್ಪ ಪಾಟೀಲ್, ಹಾಲಹಳ್ಳಿ
ಚಂದ್ರಕಾಂತ ಹನುಮಶೆಟ್ಟಿ ಪಾಟೀಲ್, ಲಾಧಾ
ಸಿದ್ಧರಾಮಪ್ಪ ಹಣಮಪ್ಪ ಪಾಟೀಲ್, ಲಾಧಾ
ವಿಶ್ವನಾಥ ಬಸವಣ್ಣೆಪ್ಪ ಮಹಾಗಾಂವ, ಲಾಧಾ
ಧರೆಪ್ಪ.ಬಿ.ಬಾಡಗಿ, ಬಾಗಲಕೋಟೆ

ಎಂ. ಬಸವ ಚೇತನ, ಕೊಯಮತ್ತೂರು
ಡಾ|| ಶ್ರೀನಿವಾಸ, ಕೊಯಮತ್ತೂರು
ಲಕ್ಷ್ಮಿ ವೈಜನಾಥ ಪಾಟೀಲ್ (ಶಿರ್ಶಿ), ಬೀದರ್
ವೀರಶೆಟ್ಟಿ ಚಿಂಚನಸೂರೆ, ಬೀದರ್
ಶಕುಂತಲಾ ಕಾಶೀನಾಥರಾವ ದೊಣ್ಣೆ, ಬೀದರ್
ಬಸವ ಜ್ಯೋತಿ ರಮೇಶ್ ಪಾಟೀಲ್, ಬೀದರ್
ಸಿದ್ದಮ್ಮ ಮಲ್ಲಿಕಾರ್ಜುನ ಬುಯ್ಯಾ, ಬೀದರ್
ಉಮಾದೇವಿ ಶಿವಕುಮಾರ್ ನಾವದಗೆ, ಬೀದರ್
ಸುನೀತಾ ವಿಶ್ವನಾಥಯ್ಯ ಡಾಕುಳಗೆ, ಬೀದರ್
ಶೋಭಾವತಿ ಬಸಪ್ಪ ಅಷ್ಟೂರೆ, ಬೀದರ್
ಬಿ.ಎಂ. ಪಾಟೀಲ್, ಬೀದರ್
ಜಾನಕಮ್ಮ ಶಿವರಾಜ ಬಿರಾದಾರ, ಬೀದರ್

Digitalised by e Sahithya Documentatalon Forum
Sponsored by Sarayu Foundation Trust

ಲಕ್ಷ್ಮಿ ಮಲ್ಲಿಕಾರ್ಜುನ ಭೋಸ್ಲೆ, ಬೀದರ್	ನೀಲಮ್ಮ ಮನ್ಮಥಯ್ಯ ಸ್ವಾಮಿ
ಶಿವರಾಜ್ ಚನ್ನಪ್ಪ ಮುದ್ದಾ, ಚಟ್ನಳ್ಳಿ	ಸುಪ್ರಿಯಾ ಓಂಪ್ರಕಾಶ್ ಮುದ್ದಾ
ಶಕುಂತಲಾ ಚಂದ್ರಪ್ಪ ಹಂಗರಗಿ, ಬೀದರ್	ಶಶಿಕಲಾ ನಂಧಗಾಂವ
ಜಗದೇವಿ ಶಿವರಾಜ ಮಾಶೆಟ್ಟಿ, ಬೀದರ್	ನೀಲಮ್ಮ ವೀರಬಸಪ್ಪ ಪಾಟೀಲ್
ಸುಮಿತ್ರಾ ಶಾಂತಪ್ಪ ಮುಗಳಿ, ಬೀದರ್	ರಾಜಶ್ರೀ ಡಾ|| ಚಂದ್ರಶೇಖರ ಮಡಕಿ
ಸಿ.ಎನ್. ಪಾಟೀಲ್, ಬೀದರ್	ಅಪ್ಪಾರಾವ ಬಿರಾದಾರೆ
ಸರಸ್ವತಿ ಬಸವರಾಜ ಭಾಲ್ಕೆ, ಲಾಡಗೇರಿ	ಶಾರದಾಬಾಯಿ ಮಲ್ಲಿಕಾರ್ಜುನ ಬಂಗಿ
ಶಶಿಕಲಾ ವಿಶ್ವನಾಥ ಶೀಲವಂತ, ಬೀದರ್	ವಿವೇಕಾನಂದ ಪ್ರಭುಲಿಂಗ ಬೆಣ್ಣೆ
ಲಕ್ಷ್ಮಿ ವೈ ಅಶೋಕ ಕುಮಾರ್, ಯರನಳ್ಳಿ	ಕಸ್ತೂರಿ ಚನ್ನಬಸಪ್ಪ ಬೇಮಳಗಿ
ಸವಿತಾ ನೀಲಕಂಠ ಸ್ವಾಮಿ, ಉಜನಿ	ಪಾರ್ವತಿ ಪರಮೇಶ್ವರ ಶಿವದೆ
ಶಿವಕಾಂತ ಅಮೃತರಾವ್ ಪ್ರೀಪೆ	ಪದ್ಮಾವತಿ ಅಮೃತಪ್ಪ ಬಿರಾದಾರ
ಅರುಣಾದೇವಿ ಶಿವಾನಂದ ಪಾಟೀಲ್	ದ್ರೌಪದಿ ಶಾಮರಾವ್ ತಗಾರೆ
ಡಾ|| ನಿವೇದಿತಾ ಡೊಣಗಾಪುರೆ	ವೀರಬಸವ ಫಾಳೆಪ್ಪ ಗುಮ್ಮಾ
ನಿರ್ಮಲಾ ಮನೋಹರ ರೂಟ್ಟಿ	ಬಸವರಾಜ ಬಿರಾದಾರ
ಶಿವ ನೀಲಮ್ಮ ಕಂಟೆಪ್ಪ ಶೆಟಕಾರ	ಬಸವರಾಜ ಸೋಮಶೆಟ್ಟಿ
ನೀಲಾಂಬಿಕೆ ಬಸವರಾಜ ಪಾಟೀಲ್, ಲಿಂಗದ ಹಳ್ಳಿ	ಚಂದ್ರಶೇಖರ್ ಭೀಮಣಪ್ಪ ಸೋಮಶೆಟ್ಟಿ
ಸಂಗ್ರಾಮಪ್ಪ ಸಿದ್ಧರಾಮಪ್ಪ ಬಿರಾದಾರ	ಶರಣಪ್ಪ ಹೋತಪೇಟೆ
ಎಂ. ಶೀತಲ್ ತಂದೆ. ವಿಜಯಕುಮರ್	ಜಯರಾಜ್ ಖಂಡ್ರೆ
ಮಾಮಡಗಿ	ಸುಭಾಷ್ ಶಂಕರಪ್ಪ ಹಳ್ಳೀಖೇಡ
ಮಹಾನಂದ ಪ್ರಕಾಶ್ ಧರಣೆ	ಲಲಿತಮ್ಮ ಶಿವಶರಣಪ್ಪ ಚಿದ್ರೆ

ಬಸವ ಕಲ್ಯಾಣದ ಮಹಾಮನೆಯಲ್ಲಿ ಆರಂಭವಾಗಲಿರುವ
ನಿತ್ಯ ಪೂಜಾನಿಧಿಗೆ 600 ರೂ ಸಲ್ಲಿಸಿದವರು.

ಶರಣರುಗಳಾದ	ಅಪ್ಪಾರಾವ ಪಾಟೀಲ್ ಗುಮ್ಮಾ
ಮಾಣಿಕಪ್ಪ ಹಳ್ಳೆ, ಯರಂಡಗಿ	ಬಸವರಾಜ ಅಡಿವೆಪ್ಪ ಹದನೂರೆ
ಚಂದ್ರಶಾ ದುಧನೆ, ಸೋಲಾಪುರ	ರಾಹುಲ್ ರಮೇಶ ಪಾಟೀಲ್
ಸಿದ್ಧಾರೂಢ ಕಲ್ಲಪ್ಪ ಸಾತಲಗಾಂವ, ಸೋಲಾಪುರ	ಗೌರವ್ ಅನಿಲಕುಮಾರ ಪಾಟೀಲ್
ಭೀಮಾಶಂಕರ್ ಬಸಪ್ಪ ಪಕಾರೆ, ಸೋಲಾಪುರ	ಲಕ್ಷ್ಮಿ. ಅಶೋಕ್ ಗಾದಗಿ
ಶಂಕರಪ್ಪ ಬಸಪ್ಪ ಪಕಾರೆ, ಸೋಲಾಪುರ	ಲಾವಣ್ಯ ಶಿವರಾಜ ತಗಾರೆ
ಶಿವಲಿಂಗಪ್ಪ ಅಣ್ಣೆಪ್ಪ ಕಿಣಗಿ, ಸೋಲಾಪುರ	ಮಾಣಿಕ್ಯಪ್ಪ ಪಟ್ನೆ
ಸಂತೋಷ್, ಬೀದರ್	ಸಿದ್ಧಮ್ಮ ಓಂಪ್ರಕಾಶ್ ಹಂಗರಗಿ
ಸುಶೀಲಾಬಾಯಿ ಶಿವಲಿಂಗಪ್ಪ ಪಾಟೀಲ್, ನಿರ್ನಾ	ವಿವೇಕಾನಂದ ಪ್ರಭುಲಿಂಗ ಬೆಣ್ಣೆ
ಜಯಶ್ರೀ ತಂದೆ. ಹಾವಗೀರಾವ್, ನಿಡೋದಾ	ಭಾಗ್ಯಶ್ರೀ ಅಣ್ಣೆಪ್ಪ ವಠಾರೆ
ಪುಷ್ಪಾ ಸೋಮನಾಥ ದಾಮಾ, ಬೀದರ್	ಪಾರ್ವತಿ ಶಶಿಧರ ಪಾಟೀಲ್
ಮಹಾದೇವಿ ಮಲ್ಲಿಕಾರ್ಜುನ ಮೂಲಗೆ, ಬೀದರ್	ಕಾಶೀನಾಥ ಮಾಳಗೆ
ಬಸಪ್ಪ ಸಿದ್ರಾಮಪ್ಪ ಪಾಟೀಲ್, ಬೀದರ್	ಸುಧಾ ಸತೀಶ್ ಚಿಲ್ಲರ್ಗಿ
ಶೋಭಾ ವೀರಶೆಟ್ಟಿ ಟೇಲರ್	ಶಿವಕುಮಾರ್ ಭೀಮಣಪ್ಪ ಸೋಮಶೆಟ್ಟಿ

ಕಲ್ಯಾಣ ಪರ್ವ ನಿರ್ವಹಣೆಗೆ

ಶರಣರುಗಳಾದ :

ಡಾ|| ಎಂ.ಸಿ. ಮೋದಿ	5000
ಡಾ|| ಎ. ಸುಶೀಲಮ್ಮ	5000
ಚನ್ನಬಸಮ್ಮ ಚನ್ನಬಸಪ್ಪ, ಮಾಚೇನ ಹಳ್ಳಿ	5001
ಮಲ್ಲಿಕಾರ್ಜುನಪ್ಪ ಹತ್ತಿ, ಬೀದರ್	2100
ಎಸ್.ವಿ. ವಿಶ್ವೇಶ್ವರಯ್ಯ, ಅಮ್ಮಸಂದ್ರ	2000
ಶಿವಶಂಕರಯ್ಯ ಜೇವಣಗಿ, ಗುಲಬರ್ಗಾ	2000
ವೀರಣ್ಣ ಬಿರಾದಾರ, ಗಡಿ ಗೌಡಗಾಂವ	1100
ಜಗದೀಶ ಮಾಣಿಕರಾವ, ಕನಕಪುರ	1000
ಗೌರಿಶಂಕರ ಶಿವರಾಯ ಪಾಟೀಲ್, ಕನಕಪುರ	1100
ಚನ್ನಯ್ಯ ಸ್ವಾಮಿ, ಬೀದರ್	1111
ಸವಿತಾ ಅನಿಲಕುಮಾರ ಪಾಟೀಲ್	1111
ಕೆ.ಹೆಚ್. ಪಾಟೀಲ್	1050
ಸುಗ್ಗಲಾಬಾಯಿ ಶಂಕರಪ್ಪ ಚಲುವಾ	1001
ಹನುಮಂತಪ್ಪ ವೀರಶೆಟ್ಟೆಪ್ಪ ಹುಗ್ಗೆ	(1 ಕ್ವಿಂಟಲ್ ಅಕ್ಕಿ)
ಸಿದ್ಧರಾಮಪ್ಪ ಪಾಟೀಲ್	1001
ಮಧುಕರ ಶೆಟಕಾರ್	1001
ಅಶೋಕ ಕುಮಾರ್ ಪಾಟೀಲ್	1101
ಎಸ್.ಸಿ. ಸುರೇಶ, ಮತಿಘಟ್ಟ	1001
ಬಸವರಾಜಪ್ಪ ಮತ್ತು ಮಕ್ಕಳು., ಎಸ್.ಕೊಪ್ಪಲು	1001
ರಾಷ್ಟ್ರೀಯ ಬಸವ ದಳ, ಎಸ್. ಕೊಪ್ಪಲು	1001
ಟಿ.ಎಲ್. ನಿಂಗೇಗೌಡ, ಅರಸೀಕೆರೆ	1001
ರಾಷ್ಟ್ರೀಯ ಬಸವ ದಳ, ನಾಗರಾಳು	1111
ಚಂದ್ರಮ್ಮ, ಹಾಸನ	1001
ಜೆ.ಬಿ. ಗೌರಮ್ಮ ಮತ್ತು ಮಕ್ಕಳು	1001
ರಾಷ್ಟ್ರೀಯ ಬಸವ ದಳ, ಹಾಸನ	1001
ಶ್ರೀ ವೀರಶೈವ ಸಂಘ, ಹಾಸನ	1001
ಈಶ್ವರಯ್ಯ, ಅಮ್ಮಸಂದ್ರ	1001
ಹೆಚ್.ಎನ್. ರಮೇಶ್, ಹಟ್ಟಿಹಳ್ಳಿ	1101
ಎಸ್. ಪ್ರಕಾಶ್ ಮತ್ತು ಸಹೋದರರು, ಸಿದ್ದಘಟ್ಟ	1000
ಎಸ್. ಮಲ್ಲಿಕಾರ್ಜುನ, ತುರುವೇಕೆರೆ	1000

Digitalised by e Sahithya Documentataion Forum
Sponsored by Sarayu Foundation Trust

ಕಲ್ಯಾಣ ಪರ್ವಕ್ಕೆ ತಟ್ಟೆ - ಲೋಟಾ

ಧಾರವಾಡ ರಾಷ್ಟ್ರೀಯ ಬಸವ ದಳದ ಶರಣೆಯರು	57
ಪ್ರಭುಶೆಟ್ಟಿ ಕುಂಚಗೆ, ಡೊಣಗಾಪುರ	50
ಸವಿತಾ ಅನಿಲಕುಮಾರ್ ಪಾಟೀಲ್	12

(ಇನ್ನು ಬಹಳ ಜನರು ಕೊಟ್ಟಿದ್ದಾರೆ)

ಜ್ಯೋತಿ ಯಾತ್ರೆಯಲ್ಲಿ ಪ್ರವಾಸದ ಒತ್ತಡ ಬಹಳ ಇರುವುದರಿಂದ ದಾಸೋಹಿಗಳ ಲಿಸ್ಟ್ ಬರೆದು ಕಳಿಸಲು ಕಾರ್ಯಕರ್ತರಿಗೆ ಸಮಯ ದೊರೆಯದು. ಹೀಗಾಗಿ ಹೆಸರು ಪ್ರಕಟಗೊಳ್ಳಲು ಸಾಧ್ಯವಾಗದು. ಆದ್ದರಿಂದ ಹೆಸರು ಮುದ್ರಣವಾಗಿಲ್ಲವೆಂದು ಬೇಸರ ಪಡುವ ಕಾರಣವಿಲ್ಲ. 500 ರೂ ಗಿಂತ ಮೇಲೆ ಕೊಟ್ಟ ಹೆಸರು ಮಾತ್ರ ಪ್ರಕಟಿಸಲು ಸಾಧ್ಯ.

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪತ್ತು ನೀಡಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಕಲ್ಯಾಣದ ಬಸವ ಮಹಾಮನೆ

ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಮುಖ್ಯ ರಸ್ತೆಯ ಪಕ್ಕದಲ್ಲಿಯೇ ಇದೆ. ಆದ್ದರಿಂದ ಆಗಮಿಸುವ ಶರಣ ಬಂಧುಗಳು ಬಸವ ಮಹಾಮನೆ ಆವರಣದಲ್ಲಿಯೇ ಇಳಿಯಬೇಕು. ಇಲ್ಲಿರುವ ಕಾರ್ಯಾಲಯದಲ್ಲಿ ವಸತಿ ವ್ಯವಸ್ಥೆಯ ವಿವರಗಳನ್ನು ನೀಡಲಾಗುವುದು. ಪ್ರಸಾದ (ಊಟ)ದ ವ್ಯವಸ್ಥೆಯನ್ನು, ಶಾಮಿಯಾನಾ ಕೋಣೆಗಳನ್ನು ಬಸವ ಮಹಾಮನೆಯ ಆವರಣದಲ್ಲೇ ಮಾಡಲಾಗಿರುವುದು.

ಬೆಂಗಳೂರು ಮತ್ತು ಬಸವ ಕಲ್ಯಾಣದ ವಿಳಾಸಗಳು

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035
2ನೇ ಬ್ಲಾಕ್, ಕಾರ್ಡ್ ರಸ್ತೆ
ರಾಜಾಜಿನಗರ, ಬೆಂಗಳೂರು-560010
☎ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
'ಸಂತೋಷ ನಿಲಯ', ವಿದ್ಯಾಶ್ರೀ ಕಾಲನಿ
ತ್ರಿಪುರಾಂತ, ಬಸವಕಲ್ಯಾಣ- 585327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 0848-652856/651921

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

   ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

Digitalised by e Sahithya Documentataion Forum
Sponsored by Sarayu Foundation Trust

ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ಚನ್ನ ಹುಣ್ಣಿಮೆ
ದಿ. 27-2-2002ರಂದು ಧ್ವಜಾರೋಹಣ

ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ
ಶರಣ. ಆರ್.ಜಿ. ಶೆಟಗಾರರಿಂದ ಚನ್ನಬಸವಣ್ಣನವರಿಗೆ ಪುಷ್ಪಾರ್ಪಣೆ ಮಾಡುವ
ಮೂಲಕ ಚನ್ನಹುಣ್ಣಿಮೆ ಉದ್ಘಾಟನೆ

ಚನ್ನಹುಣ್ಣಿಮೆಯಲ್ಲಿ ಭಾಗವಹಿಸಿದ ಅತಿಥಿಗಳು ಶಾಂತಪ್ಪ ಪಾಟೀಲ್, ಬಸವ ಕುಮಾರ ಸ್ವಾಮಿಗಳು,
ಸಿದ್ಧರಾಮ ಸ್ವಾಮಿಗಳು, ಮಾತಾ ನೀಲಗಂಗಾದೇವಿ, ಶಾಸಕರಾದ ಮಾರುತಿರಾವ್ ಮುಳೆಯವರ
ಧರ್ಮಪತ್ನಿ ಶರಣೆ ಜಯಶ್ರೀ ಮುಳೆ, ಗಣನಾಯಕಿ ಲಕ್ಷ್ಮಿಬಾಯಿ ಪಾಂಡ್ರೆ, ಉದಗೀರ್

ಚನ್ನಹುಣ್ಣಿಮೆ ಕಾರ್ಯಕ್ರಮದಲ್ಲಿ ಭಾಗಿಗಳಾಗಿರುವ ಶರಣ-ಶರಣೆಯರು

Digitalised by e Sahithya Documentataion Forum
Sponsored by Sarayu Foundation Trust

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣ ಶಾಂತಪ್ಪ ಪಾಟೀಲರಿಗೆ ಗ್ರಂಥ ಪುಷ್ಪಾರ್ಪಣೆ
ಶರಣ ವೀರಣ್ಣ ಗೌಡಗಾಂವ ಅವರಿಂದ



ಶರಣೆ. ಜಯಶ್ರೀ ಮುಳೆ ಅವರಿಗೆ ಗ್ರಂಥ ಪುಷ್ಪಾರ್ಪಣೆ
ಮಾತೆ ನೀಲಗಂಗಾದೇವಿ ಅವರಿಂದ



ಬಸವ ಮಹಾಮನೆಯಲ್ಲಿ ಶಿವರಾತ್ರಿಯಂದು ಆದಿ ಪ್ರಮಥರಿಗೆ ವಂದನೆ

ಸಾಮೂಹಿಕ ಇಷ್ಟಲಿಂಗಾರ್ಚನೆ 1. ಪೂಜ್ಯಶ್ರೀ ಸಿದ್ಧರಾಮ ಸ್ವಾಮಿಗಳು,
2. ಶರಣ ಶಿವಕುಮಾರ ಡಾಕುಳಗೆ 3. ಪೂಜ್ಯಶ್ರೀ ಬಸವ ಕುಮಾರ ಸ್ವಾಮಿಗಳು,
ಶರಣೆ. ನಿಶ್ಚಲಾಂಬಾ, ಶರಣೆ ಪಾರ್ವತಮ್ಮ, ಗುಲಬರ್ಗಾ

Digitalised by e Sahithya Documentataion Forum
Sponsored by Sarayu Foundation Trust

ಸರ್ವಶರಣರ ದಿನಾಚರಣೆಯಂದು ಸಾಮೂಹಿಕ ಇಷ್ಟಲಿಂಗಪೂಜೆ
ಶರಣೆಯರ ಸಮೂಹ



ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಶರಣರ ಸಮೂಹ

ವಿಶ್ವಧರ್ಮ ಪ್ರವಚನ ಪ್ರಾರಂಭ (21-1-2002)

ಹಿಂದುಳಿದ ವರ್ಗಗಳ ಮುಖಂಡರಾದ ಬಿ. ನಾರಾಯಣ್ ಅವರಿಗೆ
ಪೂಜ್ಯಶ್ರೀ ಗಂಗಾ ಮಾತಾಜಿಯವರಿಂದ ಸತ್ಕಾರ

Digitalised by e Sahithya Documentataion Forum
Sponsored by Sarayu Foundation Trust

ಬೀದರ್ ಸಬ್ ಜೇಲಿನ ನಿವಾಸಿಗಳಿಗೆ ಸಿಹಿ ವಿತರಿಸುತ್ತಿರುವ
ಪೂಜ್ಯಶ್ರೀ ಗಂಗಾ ಮಾತಾಜಿ

ಪೂಜ್ಯಶ್ರೀ ಗಂಗಾಮಾತಾಜಿಯವರನ್ನು ಜೇಲಿನ ದ್ವಾರದ ಬಳಿ ಸ್ವಾಗತಿಸುತ್ತಿರುವ ಅಧಿಕಾರಿ

ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭ ದಿ. 23-3-2002 ಪೂಜ್ಯ ಶ್ರೀ ಮಾತಾಜಿಯವರ ಸನ್ನಿಧಿಯಲ್ಲಿ
ಎಡದಿಂದ ಬಲಕ್ಕೆ ಶ್ರೀಮತಿ ಆಪ್ಪೂರ್, ಶ್ರೀ ಸುಭಾಷ್ ಆಷ್ಟೂರ್, ಶಿವರಾಜ ಪಾಟೀಲ್, ಚಂದ್ರಮ್ಮ
ಪಾಟೀಲ್, ಪೂಜ್ಯಶ್ರೀ ಮಾತಾಜಿ, ಪೂಜ್ಯ ಶ್ರೀ ಗಂಗಾ ಮಾತಾಜಿ, ಶಾಸಕ ರಮೇಶ್ ಕುಮಾರ್ ಪಾಂಡೆ



ಪೂಜ್ಯ ಮಾತಾಜಿಯವರ ಸ್ವಾಗತ ಸಮಾರಂಭ ದಿ. 21-3-2002 ಧ್ವಜಾರೋಹಣಕ್ಕೆ ಮುನ್ನಾ.
ಎಡದಿಂದ ಬಲಕ್ಕೆ ಶಿವಕುಮಾರ್ ಡಾಕುಳಗೆ, ಮಾಜಿ ಮಂತ್ರಿಗಳಾದ ಸುಭಾಷ್ ಆಷ್ಟೂರ್,
ಭಾಲ್ಕಿ, ಹಿರಿಯ ದಾನಿ ಚಂದ್ರಪ್ಪ ಗೌರಶೆಟ್ಟಿ, ಪೂಜ್ಯಶ್ರೀ ಬಸವ ಕುಮಾರ ಸ್ವಾಮಿಗಳು

Digitalised by e Sahithya Documentataion Forum
Sponsored by Sarayu Foundation Trust

ಲಿಂಗಾಯತ ಸಮಾಜದ ಅಧ್ಯಕ್ಷರಾದ ರಾಮಲಿಂಗಪ್ಪ
ದೇವಣಿಯವರಿಂದ ಮಾಲಾರ್ಪಣೆ

ಪೂಜ್ಯಶ್ರೀ ಮಾತಾಜಿಯವರ ಮೇಲೆ ಪುಷ್ಪವೃಷ್ಟಿ



ಮಾಜಿ ಮಂತ್ರಿಗಳಾದ ಸುಭಾಷ್ ಆಷ್ಟೂರ್ ಅವರಿಂದ ಮಾಲಾರ್ಪಣೆ

ಪೂಜ್ಯರಾದ ಮಾತಾ ದ್ವಯರಿಗೆ ಶರಣೆಯರಿಂದ ಆರತಿ

Digitalised by e Sahithya Documentataion Forum
Sponsored by Sarayu Foundation Trust

ಮುಕ್ತಾಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದಲಿತ ನೇತಾರರಾದ
ಶರಣ. ಪಾಂಡುರಂಗ ಸೂರ್ಯವಂಶಿ

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೀದರ್ ಶಾಸಕರಾದ ರಮೇಶ್ ಕುಮಾರ್ ಪಾಂಡೆ

ಶಾಸಕ ರಮೇಶ್ ಕುಮಾರ್ ಪಾಂಡೆಯವರಿಂದ ಭಾಷಣ

ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ
ಸುಭಾಷ್ ಪಾಟೀಲರಿಂದ ಭಾಷಣ

Digitalised by e Sahithya Documentataion Forum
Sponsored by Sarayu Foundation Trust



ವೈರಾಗ್ಯ ಚಕ್ರವರ್ತಿ ಅಲ್ಲಮ ಪ್ರಭುದೇವರಿಗೆ ಗುರುಕಾರುಣ್ಯವಾದ ಅನಿಮಿಷಯ್ಯನ ಕೊಪ್ಪಲು (ಬಳ್ಳಿಗಾವಿಯ ಸಮೀಪದಲ್ಲಿದೆ)ದ ಗುಡಿಯಲ್ಲಿ ಪೂಜೆ



ಪೂಜ್ಯಶ್ರೀ ಅಲ್ಲಮ ಪ್ರಭು ಸ್ವಾಮಿಗಳು ಅಲ್ಲಮ ಪ್ರಭು ಜ್ಯೋತಿಯನ್ನು ಎತ್ತಿಕೊಳ್ಳುತ್ತಿರುವದು. ಭದ್ರಾವತಿಯ ಹೆಚ್.ಎಸ್. ಬಸವರಾಜು ಜೊತೆಗೆ ಇದ್ದಾರೆ.

ಬಳ್ಳಿಗಾವಿಯಿಂದ ಅಲ್ಲಮ ಪ್ರಭು ಜ್ಯೋತಿ ಯಾತ್ರೆ ಪ್ರಾರಂಭವಾಗುತ್ತಿರುವುದು

ಜ್ಯೋತಿಯಾತ್ರೆ ಆರಂಭಕ್ಕೆ ಮುನ್ನ ಪೂಜ್ಯ ಸ್ವಾಮಿಗಳಿಂದ ಆಶೀರ್ವಚನ. ಎಡಕ್ಕೆ ಕಲ್ಮೇಶ, ಬಲಗಡೆ ಷಡಕ್ಷರಪ್ಪ ಭದ್ರಾವತಿ ಮತ್ತು ಪಂಚಾಕ್ಷರಪ್ಪ, ಭದ್ರಾವತಿ

Digitalised by e Sahithya Documentataion Forum
Sponsored by Sarayu Foundation Trust

ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಚನ್ನಬಸವ ಜ್ಯೋತಿಗೆ ಸ್ವಾಗತ
ಮಾಲಾರ್ಪಣೆ ಮಾಡುತ್ತಿರುವ ಅಶೋಕ ಶೀಲವಂತರು.

ಕಲಘಟಗಿಯಲ್ಲಿ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳ
ನೇತೃತ್ವದಲ್ಲಿ ಜ್ಯೋತಿ ಸಂಚಾರ

ಬೆಂಗಳೂರು ನಗರಕ್ಕೆ ಆಗಮಿಸಿದ ಅಲ್ಲಮಪ್ರಭು ಜ್ಯೋತಿಯನ್ನು ಸ್ವಾಗತಿಸುತ್ತಿರುವ
ಪೂಜ್ಯಶ್ರೀ ಮಾತಾಜಿಯವರು

ಅಲ್ಲಮಪ್ರಭು ಜ್ಯೋತಿಯೊಡನೆ ಪಥ ಸಂಚಲನ

Digitalised by e Sahithya Documentataion Forum
Sponsored by Sarayu Foundation Trust

ಅಲ್ಲಮ ಪ್ರಭು ಸ್ವಾಮಿಗಳ ನೇತೃತ್ವದಲ್ಲಿ ಜ್ಯೋತಿಯಾತ್ರೆಯ ಅಲಂಕೃತಗೊಂಡ ವಾಹನ

ಅಲ್ಲಮ ಪ್ರಭು ಜ್ಯೋತಿಯಾತ್ರೆಯ ಸ್ವಾಗತ ಸಮಾರಂಭ ಎಡದಿಂದ ಬಲಕ್ಕೆ ಸಾಹಿತಿ ಸತ್ಯಾನಂದ, ಪೂಜ್ಯ ಸ್ವಾಮೀಜಿ, ಡಾ|| ಎಂ.ಸಿ. ಮೋದಿ, ಪೂಜ್ಯ ಮಾತಾಜಿ, ಡಿ.ಪಿ. ಪ್ರಕಾಶ್, ಎನ್. ಪುಟ್ಟರುದ್ರ, ಎನ್.ಪಿ. ವಿಜಯಕುಮಾರ್



ಕೂಡಲ ಸಂಗಮದ ಬಸವೇಶ್ವರ ಐಕ್ಯ ಮಂಟಪದಲ್ಲಿ ಪೂಜೆ ಸಲ್ಲಿಕೆ. 25-3-2002



ಪೂಜ್ಯ ಮಾತಾಜಿಯವರು ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳವರಿಗೆ ಬಸವ ಜ್ಯೋತಿಯನ್ನು ವಹಿಸಿಕೊಡುತ್ತಿರುವುದು.

Digitalised by e Sahithya Documentataion Forum
Sponsored by Sarayu Foundation Trust



ಕೂಡಲ ಸಂಗಮದ ಸಂಗಮೇಶ್ವರ ದೇವಾಲಯದ ಆವರಣದಲ್ಲಿ ಜ್ಯೋತಿಯಾತ್ರೆಯ ತಂಡ ಸಾಗುತ್ತಿರುವುದು.



ಮಹಾಮನೆ ಮಹಾಮಠಕ್ಕೆ ಆಗಮಿಸಿದ ಜ್ಯೋತಿಯನ್ನು ಸ್ವಾಗತಿಸುತ್ತಿರುವ ಗುಲಬರ್ಗಾದ ಮಲ್ಲಪ್ಪ ಘುಲಾರೆ ಮತ್ತು ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ವೀರಣ್ಣ ಕೊರ್ಲ್ಹಳ್ಳಿ ಮತ್ತು ಜ್ಯೋತಿಯಾತ್ರೆಯ ಸಂಚಾಲಕ ಸಂಗನಗೌಡ ಪಾಟೀಲರು

ಧಾರವಾಡಕ್ಕೆ ದಿ- 12-2-2002ರಂದು ಚನ್ನಬಸವ ಸ್ವಾಮಿಗಳ ನೇತೃತ್ವದಲ್ಲಿ ಉಳವಿಯಿಂದ ಆಗಮಿಸಿದ ಚನ್ನಬಸವ ಜ್ಯೋತಿಗೆ ಪೂಜ್ಯಶ್ರೀ ಮಾತಾಜಿಯವರಿಂದ ಸ್ವಾಗತ

ಧಾರವಾಡದ ಮುಖ್ಯ ರಸ್ತೆಯಲ್ಲಿ ಚನ್ನಬಸವ ಜ್ಯೋತಿಯ ಸಂಚಾರ, ಶರಣರಿಂದ ಪಥ ಸಂಚಲನ

Digitalised by e Sahithya Documentataion Forum
Sponsored by Sarayu Foundation Trust



ಪೂಜ್ಯಶ್ರೀ ಮಾತಾಜಿಯವರ ೫೭ನೆಯ ವರ್ಧಂತಿ ಉತ್ಸವದಂದು ಧಾರವಾಡದ ಗಂಗಮ್ಮಜ್ಜ ಸೋಬಾನದ, ಕಮಲಮ್ಮ ಗೋಧಿ ಜೋಗುಳ ಹಾಡಿದರು. ಶರಣ-ಶರಣೆಯರು ಉಯ್ಯಾಲೆಯಲ್ಲಿ ಕೂರಿಸಿ ತೂಗಿದರು.



ಬೀದರ್ ನಗರದಲ್ಲಿ ದಿ-21-3-2002ರಂದು ಶರಣ ಬಂಧುಗಳು ಭವ್ಯ ಸ್ವಾಗತ ನೀಡಿದ, ಮಾತಾದ್ವಯರನ್ನು ಅಲಂಕೃತ ವಾಹನದಲ್ಲಿ ಪ್ರವಚನ ವೇದಿಕೆಗೆ ಬರಮಾಡಿಕೊಂಡರು.

ಪೂಜ್ಯರಾದ ಚನ್ನಬಸವ ಸ್ವಾಮಿಗಳಿಂದ [illegible]
[illegible]

ಮಹಾಮನೆ ಗವಿಯಲ್ಲಿ ಧ್ವಜಾರೋಹಣ ಮತ್ತು ಜ್ಯೋತಿಯ ಉದ್ದೀಪನ

Digitalised by e Sahithya Documentataion Forum
Sponsored by Sarayu Foundation Trust

ದಿ. 27-2-2002ರಂದು ಉಳಿವೆಯ ದುರ್ಗಮ ಅರಣ್ಯದಲ್ಲಿರುವ ಮಹಾಮನೆ ಗವಿಗೆ ಶರಣರ ಕಾಲುನಡಿಗೆಯ ಪಯಣ



ಮಹಾಮನೆಯ ಮುಂದೆ ಹರಿಯುವ ಕಿನ್ನರಯ್ಯನ ಹಳ್ಳದಲ್ಲಿ ಸ್ನಾನ ಮಾಡಿ ಆಯಾಸ ಪರಿಹಾರ

ಸುಕ್ಷೇತ್ರ ಉಳಿವೆಯ ಚನ್ನಬಸವೇಶ್ವರ ದಿವ್ಯಾಲಯದ ಮುಂದೆ
ಚನ್ನಬಸವ ಜ್ಯೋತಿಯ ತಂಡ

Digitalised by e Sahithya Documentataion Forum
Sponsored by Sarayu Foundation Trust

ಕಲ್ಯಾಣ ಕಿರಣ CPMG/KA/BGW-50 ಏಪ್ರಿಲ್ - 2002
R.NO. 19980/70 WPP (W) - 17



ಕೂಡಲ ಸಂಗಮದ ಬಸವೇಶ್ವರ ಐಕ್ಯಮಂಟಪದಿಂದ
ಬಸವ ಜ್ಯೋತಿ ಯಾತ್ರೆಯ ಪ್ರಾರಂಭ ದಿ. 25-3-2002ರಂದು

Digitalised by e Sahithya Documentataion Forum
Sponsored by Sarayu Foundation Trust